ವರದಿಯನ್ನು ಒಪ್ಪಿಸುವುದು

ಶ್ರೀ ವೈಜನಾಥ್ ಪಾಟೀಲ್ (ಅಧ್ಯಕ್ಷರು : ಅಂದಾಜು ಸಮಿತಿ) : ಮಾನ್ಯ ಅಧ್ಯಕ್ಷರೆ, ಅಂದಾಜು ಸಮಿತಿಯ ಕೃಷ್ಣಮೇಲ್ದಂಡೆ ಯೋಜನೆಯ ನಾಲ್ಕನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಬೇಡಿಕೆಯ ಸಂಖ್ಯೆ 8 ರೇಷ್ಮೆಯ ಬಗ್ಗೆ, ಬೇಡಿಕೆಯ ಸಂಖ್ಯೆ 9 ಸಕ್ಕರೆಯ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದರ ಜೊತೆಗೆ ಕಬ್ಬಿನ ಬಗ್ಗೆ ಸಹ ಚರ್ಚೆಗೆ ತೆಗೆದುಕೊಂಡಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು : ಕಬ್ಬು ಸಪರೇಟ್ ಆಗಿ ಬರುವುದಿಲ್ಲ. ಕಬ್ಬು ಕೃಷಿ ಇಲಾಖೆಯಲ್ಲೇ ಬಂದುಬಿಡುತ್ತದೆ.

ಮಾನ್ಯ ರಾಜಣ್ಣನವರೇ ತಾವು ಚರ್ಚೆಯನ್ನು ಪ್ರಾರಂಭ ಮಾಡಿ. ಮಾನ್ಯ ಪುಟ್ಟಣ್ಣಯ್ಯನವರೇ, ತಾವು ಇಂದೇ ಮುಗಿಸಿಬಿಡಬೇಕು. ಏಕೆಂದರೆ ಅನಂತರ ಬೇಡಿಕೆಯನ್ನು ಮತಕ್ಕೆ ಹಾಕಿಬಿಡುತ್ತೇವೆ. ಬಹಳ ಬೇಡಿಕೆಗಳಿದೆ. ಅವುಗಳನ್ನೆಲ್ಲ ಮುಗಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ತಾವು ಹೇಗೆ ತೀರ್ಮಾನ ತೆಗೆದುಕೊಳ್ಳುತ್ತೀರೋ ಅದಕ್ಕೆ ನಾವು ಬದ್ಧರಾಗಿರುತ್ತೇವೆ. ಓಟಿಂಗ್ ಮಾಡುವುದಕ್ಕೆ ಅವರು ತಯಾರಾಗಿದ್ದಾರೆಂದರೆ ಅದನ್ನೇ ಮಾಡೋಣ. ಆದರೆ ಅವರು ಅದಕ್ಕೆ ತಯಾರಾಗಿದ್ದಾರೆಯೇ?

ಅಧ್ಯಕ್ಷರು : ಓಟಿಂಗ್‌ಗೆ ನೀವೂ ಅವರು ತಯಾರಾಗಿರಬಹುದು, ಆದರೆ ನಮಗೆ ಚರ್ಚೆ ಬೇಕಾಗಿದೆ. ಮಹಿಳಾ ಸದಸ್ಯರುಗಳು ಚರ್ಚೆಯಾಗಲೇ ಬೇಕು, ಸಭೆಯು ಹತ್ತು ಗಂಟೆಯವರೆಗೆ ಬೇಕಾದರೂ ನಡೆಯಲಿ ಎಂದು ಗಲಾಟೆ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು 6ನೇ ತಾರೀಖು ಸಮಾವೇಶಗೊಂಡು ಬೆಳಿಗ್ಗೆ ಒಂದು ಗಂಟೆಯ ಕಾಲ ಪ್ರಶ್ನೋತ್ತರ ಆದಮೇಲೆ ಇದೇ ವಿಚಾರದ ಮೇಲೆ ಚರ್ಚೆ ಮಾಡೋಣ. ಈಗ ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡಿ ಎಷ್ಟು ಆಗುತ್ತದೋ ಅಷ್ಟನ್ನು ಮಾಡೋಣ.

ಅಧ್ಯಕ್ಷರು : ಆಗಬಹುದು. ಮಾನ್ಯ ರಾಜಣ್ಣನವರೆ, ಈಗ ತಾವು ಚರ್ಚೆ ಪ್ರಾರಂಭ ಮಾಡಿ.

ವಿತ್ತೀಯ ಕಾರ್ಯಕಲಾಪ.

1998-99ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೇ, I am a farmer,

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಮಣ್ಣಿನ ಮಕ್ಕಳು, ನಮ್ಮ ರಾಜಣ್ಣನವರು ಸಗಣಿಯ ಮಕ್ಕಳು. ಏಕೆಂದರೆ ಅವರು ಹೈನುಗಾರಿಕೆಯಲ್ಲಿ ಬಹಳ ಆಸಕ್ತಿ ಇರತಕ್ಕಂಥವರು.

ಶ್ರೀ ಎನ್. ರಾಜಣ್ಣ (ಭಾರತೀನಗರ) : ಸನ್ಮಾನ್ಯ ಅಧ್ಯಕ್ಷರೇ, ಇಟ್ಟರೆ ಸಗಣಿಯಾದೆ, ತಟ್ಟಿದರೆ ಬೆರಣಿಯಾದೆ, ಸುಟ್ಟರೆ ಹಣಿಗೆ ವಿಭೂತಿಯಾದೆ, ಹಾಗೆಯೇ ಬಿಟ್ಟರೆ ಮೇಲುಗೊಬ್ಬರವಾದೆ ನೀನಾರಿಗಾದೆಯೋ ಎಲೆ ಮಾನವ, ಎಂಬಂತೆ ಅದರ ಜೊತೆ ನಾನು ಕಳೆದ ಐವತ್ತು ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ಇಲ್ಲಿರುವ ತೊಂಬತ್ತು ಭಾಗ ಸದಸ್ಯರುಗಳು ಮಣ್ಣಿನ ಸೇರಿದರೆ ಮಾತ್ರ ಫಲವತ್ತಾದ ಬೆಳೆ ಬರುತ್ತದೆ. ನಮ್ಮ ಸದಸ್ಯ ಸ್ನೇಹಿತರೊಬ್ಬರು ಬೆಳೆಗೆ ಗೊಬ್ಬರವನ್ನು ಉಪಯೋಗ ಮಾಡಬೇಕೆಂದು ಹೇಳುತ್ತಿದ್ದರು. ಅದರ ಬಗ್ಗೆ ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸಗಣಿ ಎಂದರೆ ಹಸು ಹಾಕತಕ್ಕ ಸಗಣಿಯೋ, ಎಮ್ಮೆ ಹಾಕುವ ಸಗಣಿಯೋ ?

ಶ್ರೀ ಎನ್. ರಾಜಣ್ಣ : ನಾಲ್ಕು ಕಾಲಿರುವ ಹಸು ಹಾಕುವ ಸಗಣಿ. ಮಾನ್ಯ ಅಧ್ಯಕ್ಷರೆ, ನಾನು ಇಂದು ಬೇಡಿಕೆಯ ಸಂಖ್ಯೆ 1,2,3,4ರ ಬಗ್ಗೆ ಮಾತನಾಡ ಬಯಸುತ್ತಿದ್ದೇನೆ. ಅದರ ಜೊತೆಗೆ ನಾನು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಬೇಕೆಂದಿರುವೆ. ಅದರ ಬಗ್ಗೆ ಮಾತನಾಡುವ ಬಗ್ಗೆ ಮೊನ್ನೆ ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಪತ್ರವನ್ನು ಕೊಟ್ಟಿದ್ದೆ, ಆದರೆ ಅವರು ಇಂದು ಸಭೆಯಲ್ಲಿ ಇಲ್ಲ. ಆದರೆ ಹಿರಿಯ ನಾಯಕರುಗಳಿದ್ದಾರೆ. ಬಹಳ ಸಂತೋಷ. ಇವತ್ತು ವ್ಯವಸಾಯ, ತೋಟಗಾರಿಕೆ ಹೈನುಗಾರಿಕೆ ಮತ್ತು ಮೀನುಗಾರಿಕೆ ಈ ನಾಲ್ಕು ಅಂಶಗಳು ಮನುಷ್ಯನ ಆರೋಗ್ಯಕ್ಕೆ ಬಹಳ ಮುಖ್ಯವಾದುದು. ಇವತ್ತು ಹಸಿರು ಕ್ರಾಂತಿ ಶುರು ಮಾಡಿದ್ದು . Deputy Prime Minister of India our great Leader Jagajivan Ram, ಅವರ ಕಾಲದಲ್ಲೇ ಪ್ರಾರಂಭವಾಯಿತು. 1951 ರಲ್ಲಿ ನಮ್ಮ ದೇಶದಲ್ಲೇ 50 ಲಕ್ಷ ಟನ್ ಆಹಾರಧಾನ್ಯ ಬೆಳೆಯುತ್ತಿದ್ದರು. We have reached to the stage of prodeucing 200 millions tons of foodgrains in this country. ಆದರೆ ಗ್ರೀನ್ ರೆವಲ್ಯೂಷನ್ ಸಕ್ಸೀಡ್ ಆಗಿದೆ. ಅದಕ್ಕೆ ಕಾರಣವೇನೆಂದರೆ ಸನ್ಮಾನ್ಯ ಹಿರಿಯ ಸಚಿವರಾದ ಬೈರೇಗೌಡರು ಬಹಳ ಹೋರಾಟ ಮಾಡಿದ್ದಾರೆ. ತಾವು 11 ಲಕ್ಷ ಟನ್ ಫರ್ಟಿಲೈಜರ್ ಉಪಯೋಗ ಮಾಡಿ 93.47 ಲಕ್ಷ ಟನ್ ಆಹಾರಧಾನ್ಯವನ್ನು ಕರ್ನಾಟಕ ರಾಜ್ಯದಲ್ಲೆ ಪ್ರೊಡ್ಯೂಸ್ ಮಾಡಿಸಿದ್ದೀರಿ. ಅದಕ್ಕೆ ತಾವು 235 ಕೋಟಿ ರೂಪಾಯಿ ಸಹಾಯಧನ ಕೊಟ್ಟಿದ್ದೀರಿ. We have paid 235 crores as a subsidy. Total cost of this fertizlier comes to nearly Rs.700 crores. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಒಂದು ಮಾತು ಹೇಳಿದ್ದರು. ಇದೆಲ್ಲಾ ಬಹಳ ಮುಖ್ಯವಾದುದು. You are a revoultionery type of leader, bring this Gandhian Policy in this country, MR,Byregowda, M r. Siddaramaiah and Mr. J.H. Patel and you are also Gandhian. ನೀವೂ ಸೇರಿಕೊಂಡು, ನೀವೆಲ್ಲಾ ಸೇರಿಕೊಂಡು ಗಾಂಧೀತತ್ವವನ್ನು ನಮ್ಮ ದೇಶದಲ್ಲೇ ತರಲೆಲ್ಲವೆಂದರೆ ಇನ್ನು ಕಷ್ಟ ಕಾಲಕ್ಕೆ ಸಿಗುವಂತಹ ಪರಿಸ್ಥಿತಿಗೆ ಬರುತ್ತೀರಿ. 8ನೇ ತಾರೀಖು ಸನ್ಮಾನ್ಯ ನಂಜುಂಡಪ್ಪನವರು ಪತ್ರಿಕೆಯಲ್ಲೇ ಹೇಳುತ್ತಾರೆ. ಇವತ್ತು ಭಾರತ ದೇಶದಲ್ಲೆ ಫರ್ಟಿಲೈಜರ್ಸ್‌ಗೆ 8,300 ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತಿದ್ದೀರಿ. ಇದನ್ನು ಕೊಡಬೇಕಾದರೂ ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಯಾದಾಗ

ಯುನೈಟೆಡ್ ಫ್ರಂಟ್ ಸರ್ಕಾರ ರೈತರ ಬಗ್ಗೆ ಚಿಂತನೆ ಮಾಡಿ, ಈ ಒಂದು ಸಾಧನೆ ಇವತ್ತು ಸಕ್ಸೀಡ್ ಆಗಿದೆ. The credit must go to then Prime Minister MR. Devegowda, the United Front Government And the Janatadal Government ,ಇಲ್ಲೇಇನ್ನೊಬ್ಬ ಧೀಮಂತ ಅಧಿಕಾರಿ ಹನುಮಂತರಾವ್ in his report says have to beg foreign countries to bring raw matterials to purchase more and more fertilizers in this country.. ನಾವು ಇವತ್ತು ಬಹಳ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. 8,500 ಕೋಟಿ ರೂಪಾಯಿ ಎಷ್ಟು ದಿನ ರೈತರಿಗೆ ಕೊಡುತ್ತೀರಿ ಎನ್ನುವುದನ್ನು ಯೋಚನೆ ಮಾಡಬೇಕು. ಕರ್ನಾಟಕ ರಾಜ್ಯದಲ್ಲೆ 350 ಕೋಟಿ ರೂಪಾಯಿ ಈ ವರ್ಷದಲ್ಲಿ ಕೊಟ್ಟಿದ್ದೀರಿ. ಇದು ಇನ್ನು ಎಷ್ಟು ವರ್ಷ ಕೊಡುತ್ತೀರಿ ಎನ್ನುವುದನ್ನು ಚಿಂತನೆ ಮಾಡಬೇಕು. ಇದೆಲ್ಲಾ ಚಿಂತನೆ ಮಾಡುವಾಗ ನಾವು ಗಾಂಧಿಯನ್ನು ಮರೆತು ಬಿಟ್ಟಿದ್ದೇವೆ. ಮಾನ್ಯ ಜೆ.ಹೆಚ್. ಪಟೇಲರು ಕಳೆದ ಆಗಸ್ಟ್ ನಲ್ಲೇ ಒಂದು ಮಾತು ಹೇಳಿದ್ದರು. ಮಹಾತ್ಮಾ ಗಾಂಧಿ ಎಕಾನಮಿ ಕೈಬಿಟ್ಟಿದ್ದೇವೆ. ಇವತ್ತು ಗಾಂಧಿ ನಮ್ಮ ಮುಂದೆ ಇಲ್ಲ. ಅವರ ತತ್ವಗಳನ್ನು ಕೈಬಿಟ್ಟಿದ್ದೇವೆ. ಅವರ ತತ್ವಗಳನ್ನು ದಯವಿಟ್ಟು ಅಳವಡಿಸಿಕೊಳ್ಳಿ ಎಂದು. ಎಕಾನಮಿ ಎಲ್ಲಿದೆ? ಎಲ್ಲಿದೆ ಎಂದರೆ ಇಂಡಿಯನ್ ಎಕಾನಮಿ ಬ್ಯಾಂಕ್ ನಲ್ಲೆ ಅಥವಾ ರಿಸರ್ವ್ ಬ್ಯಾಂಕ್ ನಲ್ಲೆ, ಇಲ್ಲ. ಯಾವ ಮಂತ್ರಿಗಳ ಹತ್ತಿರ ಇಲ್ಲ. ಜನಗಳ ಹತ್ತಿರ ಇಲ್ಲ. The Indian Economy is in the soil. ಗಾಂಧಿಯವರು ಹೇಳಿದ ಪ್ರಕಾರ ಮಣ್ಣಿನಲ್ಲಿ ಇಂಡಿಯನ್ ಎಕಾನಮಿ ಇರುವುದು.

MR. SPEAKER : Undisputable truth.

ಶ್ರೀ ವಾಟಾಳ್ ನಾಗರಾಜ್ : ತಾವು ಗಾಂಧೀಜಿಯವರ ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ತಾವು ಹೇಳಿದಿರಿ, ಅವರು ಮತ್ತೊಂದು ಮಾತು ಮದ್ಯಪಾನವನ್ನು ಮಾಡಬಾರದೆಂದು ಹೇಳಿದರು. ಅದರ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಶ್ರೀ ಎನ್. ರಾಜಣ್ಣ : ಮದ್ಯಪಾನ ಮಾಡುವುದು ಅವರ ಪರ್ಸನಲ್ how to live in this country , how to become richest country ..

ಅಧ್ಯಕ್ಷರು : ರಾಜಣ್ಣನವರೇ, ನೀವು ಹೇಳಿದ್ದುದು ಸತ್ಯ. ಇಂಡಿಯನ್ ಎಕಾನಮಿ ಮಣ್ಣಿನಲ್ಲಿ ಇದೆ. ನಿಜ. ಅದನ್ನು ಯಾರೂ ಪ್ರಶ್ನೆ ಮಾಡುವ ಹಾಗೆ ಇಲ್ಲ. ಮುಂದುವರಿಸಿ.

ಶ್ರೀ ಎನ್. ರಾಜಣ್ಣ: ಸರ್ ಅದಕ್ಕೆ ಉದಾಹರಣೆ ಕೊಡುತ್ತೇನೆ.When Gandhi was in Ashram in the year in 1940 or 1941-42, the No.1 Economist in England Dr. Kumarappa came to India.

ಡಾ: ಕುಮಾರಪ್ಪ ಅವರು ಭಾರತಕ್ಕೆ ಬಂದಾಗ ಗಾಂಧಿ ಜೊತೆಯಲ್ಲಿ ಅವರು ಇರುತ್ತಾರೆ. ಗಾಂಧಿಯವರ ಎಕಾನಮಿ ನೋಡುತ್ತಾರೆ. ಆದರೆ ಬೆಳಿಗ್ಗೆ ಅವರು ಎಲ್ಲೆ ಪಾಯಿಖಾನೆ ಮಾಡುತ್ತಾರೆಂದು ಅವರ ಹಿಂದೆನೇ ಇವರೂ ಹೋಗುತ್ತಾರೆ. ಗಾಂಧೀಜಿಯವರು ಆಶ್ರಮ ಬಿಟ್ಟು ನೂರು ಮೀಟರ್

ದೂರ ಹೋಗಿ ಮಣ್ಣು ತೆಗೆದು ಅದರಲ್ಲಿ ಪಾಯಿಖಾನೆ ಮಾಡಿ ಮಣ್ಣು ಮುಚ್ಚಿ ಬರುತ್ತಾರೆ. ನಾವು ಪಾಯಿಖಾನೆ ಎಂದರೆ ಅಸಹ್ಯ ಪಡಬಾರದು. ಸಗಣಿ ಎಂದರೆ ಅಸಹ್ಯ ಪಡಬಾರದು. ನನಗೆ ಕನ್ನಡ ಮಾತನಾಡುವಾಗ ಸ್ವಲ್ಪ ತಪ್ಪಾಗುತ್ತದೆ. ಸರಿಪಡಿಸಿಕೊಳ್ಳಿ. ನಾನು ಅಂಗ್ಲೋ ಕನ್ನಡ ಮಾತನಾಡುವುದು. ನಾನು ಬ್ರಿಟಿಷರ ಹತ್ತಿರ ಇದ್ದಿದ್ದು. ರಾಮನಗರದ ಶಾಸಕರು ಹೇಳುತ್ತಿದ್ದರು. ಇವತ್ತು ಬೆಂಗಳೂರು ನಗರದಲ್ಲಿ 60 ಲಕ್ಷ ಜನಸಂಖ್ಯೆ ಇದ್ದಾರೆ. 60 X 2 ರೂಪಾಯಿ ಎಂದರೆ ಇಷ್ಟು ವೇಸ್ಟ್ ನಾಲೆಗೆ ಹೋಗುತ್ತಿದೆ. ಇದೆಲ್ಲಾ ಕೊಳೆತು ಏನಾಗುತ್ತಿದೆ ಎಂದರೆ ಭೂಮಿ ಕೆಟ್ಟಿದೆ. ನೀರು ಕೆಟ್ಟಿದೆ. ಗಾಂಧೀಜಿಯವರು ಹಳ್ಳಿ ಬಂದು ನಗರವಾಗಬೇಕು, ಆದರೆ ಮಹಾನಗರವಾಗಬಾರದು ಎಂದು ಹೇಳಿದರು. ಇವತ್ತು ಹಳ್ಳಿ ಬಂದು ನಗರವಾಯಿತು, ನಗರ ಮಹಾನಗರವಾಯಿತು, ಮಹಾನಗರ ಬಂದು ಮೆಗಾಸಿಟಿ ಆಯಿತು. ನಮ್ಮ ಕೊಳಕನ್ನು ನಾವೇ ಬೆಂಗಳೂರು ನಗರದಲ್ಲಿ ತಿನ್ನುತ್ತಿದ್ದೇವೆ. ಇವತ್ತು ವೇಸ್ಟ್ ಎಲ್ಲಾ ಎಲ್ಲಿಗೆ ಹೋಗುತ್ತಿದೆ? ಒಂದು ಬೆಳಂದೂರು ಕರೆಗೆ ಹೋಗುತ್ತಿದೆ. ಇನ್ನೊಂದು ಕಡೆ ರಾಮನಗರದ ಹತ್ತಿರ ಬೈರಮಂಗಲ ಕೆರೆಗೆ ಹೋಗುತ್ತಿದೆ. ಇಲ್ಲಿ ಹೋಗಬೇಕಾದರೆ ಕೆಮಿಕಲ್ಸ್ ಎಲ್ಲಾ ಸೇರಿಕೊಳ್ಳುತ್ತದೆ. ಮೈಸೂರು ರೋಡ್‌ನಲ್ಲಿ ಎಳನೀರು ಕುಡಿದರೆ ನೆಕಸ್ಟ್ ಮೊಮೆಂಟ್‌ನಲ್ಲಿ ಅಪ್‌ಸೆಟ್ ಆಗಿ ಅಲರ್ಜಿಕ್ ಆಗುವ ಪರಿಸ್ಥಿತಿಗೆ ಬಂದಿದೆ. ಬೋರ್‌ವೆಲ್ ಕೆಟ್ಟುಹೋಗಿದೆ. ಅದಕ್ಕೆ ಗಾಂಧೀಜಿಯವರು ಹಳ್ಳಿ ಬಂದು ನಗರವಾಗಬೇಕು ಎಂದು ಹೇಳಿದರು. All waste must go to the soil direct ಆಗಿ ಎಂದು ಹೇಳಿದರು. ಇದೇ ಬೆಂಗಳೂರಿನಲ್ಲಿ 50 ಲಕ್ಷ ರೂಪಾಯಿಯಷ್ಟು ವೇಸ್ಟ್ ಆಗುತ್ತಿದೆ. ನಾವು ಇದನ್ನು ಅಂಡರ್‌ಗ್ರಾಂಡ್ ಡ್ರೈನೇಜ್ ಸಿಸ್ಟಂನಲ್ಲಿ ಕಳುಹಿಸಿ ಎಲ್ಲಾ ಪಾಷಾಣ ಆಗಿ ನಮಗೇ ಅದು ರಿಫ್ಲೆಕ್ಟ್ ಆಗುತ್ತಿದೆ.

6.10 ಪಿಎಂ

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣನವರು ಹೇಳುವುದರಲ್ಲೂ ಒಂದು ಒಳ್ಳೆಯ ಪಾಯಿಂಟ್ ಇದೆ, 60 ಲಕ್ಷ ಜನರು ವಿಸರ್ಜಿಸಲ್ಪಟ್ಟ ಮಲದಿಂದ ಬಯೋಗ್ಯಾಸ್ ಮಾಡಿ ನಂತರ ಅದನ್ನು ಡ್ರೈ ಮಾಡಿದರೆ ಅದರ ವಾಸನೆಯೂ ಹೋಗಿಬಿಡುತ್ತದೆ. ಅದನ್ನು ಗೊಬ್ಬರ ಮಾಡಿ ಕೊಡುವಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡಿದರೆ ಭಾರೀ ಅನುಕೂಲವಾಗುತ್ತದೆ. ಆದುದರಿಂದ ಅದಕ್ಕೆ ಬಯೋಗ್ಯಾಸ್ ಪ್ಲಾಂಟ್ ಹಾಕಿದರೆ ಗ್ಯಾಸ್ ಆಗಿ ಪರಿವರ್ತನೆಯಾಗಿ ನಂತರ ಅದು ಡ್ರೈ ಫರ್ಟಿಲೈಸರ್ ಆಗಿ ಭೂಮಿಗೆ ಉಪಯೋಗಿಸಿದರೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ಏನಾದರೂ ವ್ಯವಸ್ಥೆ ಮಾಡುವಂಥಾದ್ದಕ್ಕೆ ತಾವು ತಿಳಿಸಬಹುದು.

Sri N. Rajanna : I am very grateful to you, Sir. You have come to my point. I asked the Hon'ble Minister for Rural Development. My question is here. ನನ್ನ ಗೆಳೆಯರೊಬ್ಬರು ನಾನು ಪಾಯಖಾನದ ಬಗ್ಗೆ ಮಾತನಾಡಿದ್ದೇನೆಂದು ಹೇಳಿದರು. ಪಾಯಖಾನವನ್ನು ಉಳಿಸಿದರೆ we can save atleast in Karnataka, not less than Rs. 500 crores. ಸಗಣಿ ಮತ್ತು ಪಾಯಖಾನವನ್ನು ಉಳಿಸಿದರೆ 500 ಕೋಟಿ ರೂಪಾಯಿಗಳು ಉಳಿಯುತ್ತದೆ. ನಾನು ಒಂದೇ

ಸಲ ಫರ್ಟಿಲೈಜರ್ಸ್ ಅನ್ನು ಕಟ್‌ಡೌನ್ ಮಾಡಿ ಎಂದು ಹೇಳುವುದಿಲ್ಲ, ಏಕೆಂದರೆ ಇದನ್ನು ಮಲ್ಟಿ ನ್ಯಾಷನಲ್ಸ್‌ಗಳು ಡೀಲ್ ಮಾಡುತ್ತಿದ್ದಾರೆ. ಆದುದರಿಂದ ಇದನ್ನು ಸ್ಟೆಪ್ ಬೈ ಸ್ಟೆಪ್ ಮಾಡಬಹುದು. ನಾನು ಈ ವಿಷಯವಾಗಿ ಒಂದು ಪ್ರಶ್ನೆಯನ್ನು ಕೇಳಿದ್ದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಅವರು ಹೇಳುವಂಥಾದ್ದು ಡ್ರೈನೇಜ್ ಬೇಡವೆಂದು ಅಲ್ಲವೇ?

ಶ್ರೀ ಎನ್. ರಾಜಣ್ಣ : ಡ್ರೈನೇಜ್ ಇಲ್ಲದಿದ್ದರೆ ಆಗುತ್ತದೆಯೆ?

MR. SPEAKER : There is some force in his argument. ಅವರು ವೇಸ್ಟ್ ಆಗುವುದಕ್ಕೆ ಬಿಡಬಾರದೆಂದು ಹೇಳುತ್ತಾರೆ. ಅದನ್ನು ಉಪಯೋಗಿಸುವಂತೆ ಆಗಬೇಕು, ರೀಸೈಕಲಿಂಗ್ ಆಗಬೇಕೆಂದು ಹೇಳುತ್ತಿದ್ದಾರೆ. It is a valid point.

SRI. N. RAJANNA : I am coming to Mr.Puttannaiah's point. My question No. 658 dated 25.3.1998. How many latrines have been constructed under "Nirmala Grama" Yojana in the rural areas of the state till now. ಎಂದು ನಾನು ಕೇಳಿದೆ. ಅದಕ್ಕೆ 3,67,997 latrines have been constructed in the rural areas upto 31.1.1998

1998ರವರೆಗೆ ಎಂದು ರಿಪ್ಲೈ ಕೊಟ್ಟಿದ್ದಾರೆ. In what manner the waste of these latrines is being disposed off? ಈ ಪ್ರಶ್ನೆಯನ್ನು ಯಾರೂ ಕೇಳಲಿಲ್ಲ. ನಾನು ಬುದ್ಧಿ ಇದ್ದೋ ಇಲ್ಲದೆಯೋ ದೇಶದ ಹಿತ ದೃಷ್ಟಿಯಿಂದ ಇದನ್ನು ಕೇಳಿದ್ದೇನೆ. ಇದಕ್ಕೆ ಏನು ಹೇಳಿದ್ದಾರೆಂದರೆ the excreta is collected in soak-pits for being converted into manure over a period of one and half years ಎಂದು ಹೇಳಿದರು. ಇನ್ನೊಂದು ಪ್ರಶ್ನೆಗೆ is there nay programme of processing of these wastes on the skirts of the village for its proper use. ನೀವು ಮೂರು ಲಕ್ಷ ಟಾಯ್‌ಲೆಟ್ ಅನ್ನು ಕೊಡುತ್ತೀರಿ, ಅದು ಚೋಕ್ ಫಿಟ್ ಆಗುತ್ತದೆ. ನಾವು ಬೆಂಗಳೂರಿನಲ್ಲಿ ಏನಾಗುತ್ತಿದೆಂಬುದನ್ನು ನೋಡುತ್ತಿದ್ದೇವೆ. ಇದು ಕೆಲವರು ವರ್ಷಗಳಾದ ಮೇಲೆ ಮಳೆ ಬಂದಾಗ ಫಿಟ್‌ನಲ್ಲಿರುವಂಥಾದ್ದು ಬೋರ್‌ವೆಲ್‌ಗಳಿಗೆ ಹೋಗುತ್ತದೆ. ಅದನ್ನು ಜನರು ಕುಡಿಯುತ್ತಿದ್ದಾರೆ ಇದು ಓಪನ್ ವೆಲ್‌ನಲ್ಲಿ ಬರುತ್ತದೆ. ಆದುದರಿಂದ ನಾನು ಇದನ್ನು ಸಜೆಸ್ಟ್ ಮಾಡಿದೆ, ಈಗ ಸದನದಲ್ಲಿ ಮಾನ್ಯ ಅರ್ಥ ಸಚಿವರು, ಕೃಷಿ ಸಚಿವರು, ಸಂಬಂಧಪಟ್ಟಂತಹ ಎಲ್ಲಾ ಮಂತ್ರಿಗಳು ಇದ್ದಾರೆ. ಒಂದು ಹಳ್ಳಿಯಲ್ಲಿ ಮುನ್ನೂರು ಮನೆಗಳು ಇವೆ ಎಂದು ಆದರೆ ಅಂತಹ 4-10ಹಳ್ಳಿಗಳನ್ನು ತೆಗೆದುಕೊಳ್ಳೋಣ. ಈ ಟಾಯ್ಲೆಟ್ ಅನ್ನು ಅಂಡರ್ ಗ್ರೌಂಡ್ ಸಿಸ್ಟಂ ಮಾಡಿ ನಾಲ್ಕು ಕಡೆ ನಾಲ್ಕು ಗೋಬರ್ ಗ್ಯಾಸ್ ಪ್ಲಾಂಟ್ ಅನ್ನು ಸೆಟಿಫಿಕ್ ಆಗಿ ಮಾಡಿದರೆ ಸ್ಟ್ರೀಟ್‌ಗೆ, ಮನೆಗಳಿಗೆ ಲೈಟ್ ಬರುತ್ತದೆ. ಈ ವೇಸ್ಟ್ ಮೇಲೆ ನೊಣ ಮುತ್ತುವುದಿಲ್ಲ, ಸೊಳ್ಳೆಗಳು ಇದರ ಮೇಲೆ ಕುಳಿತು ಮರಿಗಳನ್ನು ಮಾಡುವುದಿಲ್ಲ. ಈ ವೇಸ್ಟನ್ನು

L.A-8370-25

ಡ್ರೈ ಮಾಡಿದರೆ ಒಂದು ಕೆ.ಜಿ.ಗೆ ಒಂದು ರೂಪಾಯಿಯಂತೆ ಮಾರಾಟ ಮಾಡಬಹುದು. ಇವತ್ತು ಟಿ.ಎ.ಪಿ. ಒಂದು ಕೆ.ಜಿ.ಗೆ ಒಂದು ರೂಪಾಯಿಯಂತೆ ಮಾರಾಟ ಮಾಡಬಹುದು. ಇವತ್ತು ಟಿ.ಎ.ಪಿ ಒಂದು ಕೆ.ಜಿ.ಗೆ 10 ರೂಪಾಯಿ ಇದೆ. ಈ ವಿಚಾರವಾಗಿ ಮಾನ್ಯ ಬೈರೇಗೌಡರು ಹೇಳಿದ್ದಾರೆ ಬಯಾಲಾಜಿಕಲ್ ಗಾರ್ಡನ್, ಬಯಾಲಾಜಿಕಲ್ ಕಿಚನ್ ಮಾಡಬೇಕೆಂದು ನೀವು ಹೇಳಿದ್ದೀರಿ. ಆದರೆ ಇದನ್ನು ಕಾರ್ಯರೂಪಕ್ಕೆ ತರುವುದು, it is a very difficult task. ನಮ್ಮ ಹಿರಿಯ ಮಂತ್ರಿಗಳಿಗೆ ವಿಲ್, ದಿಲ್, ಇದೆ. ಇದು ಎರಡೂ ಇದೆ, ಆದುದರಿಂದ ಈ ಸ್ಕೀಂ ಅನ್ನು ನಾವು ಜಾರಿಗೆ ತರುವುದರಲ್ಲಿ ದೂರವಿಲ್ಲ. I request the Hon'ble Minister Mr. Byre Gowda who has succeeded in "Green Revolution" I want the "Green Revolution" must be converted into "kottige gobbara" Revolution. ಬೆಂಗಳೂರು ಸಿಟಿಯಲ್ಲಿ ಬೆಳಗಿನ ಸಮಯದಲ್ಲಿ ಹೋದರೆ ಒಂದು ವಾರ್ಡಿಗೆ ಇನ್ನೂರು ಕೆ.ಜಿ.ಯಷ್ಟು ಅನ್ನ ಸಾಂಬರ್ ಫುಟ್‌ಪಾತ್ ಮೇಲೆ ಸಿಗುತ್ತದೆ. ಈ ರೀತಿಯಾಗಿ ನೋಡಿದರೆ ಕಡಿಮೆ ಎಂದರೂ ಐವತ್ತು ಸಾವಿರ ಕೆ.ಜಿ.ಯಷ್ಟಾದರೂ ವೇಸ್ಟ್ ಫುಡ್ ಸಿಗುತ್ತದೆ. ಇದೆಲ್ಲಾ ಎಲ್ಲಿ ಹೋಗುತ್ತೆದೆಂದರೆ ಎಲ್ಲೋ ಡಂಪ್ ಮಾಡುತ್ತಿದ್ದಾರೆ. ಈ ಡಂಪಿಂಗ್ ಯಾರ್ಡಿನಲ್ಲಿ ಈ ವೇಸ್ಟ ಫುಡ್ ಎಲ್ಲಾ ತೆಗೆದುಕೊಂಡು ಡಂಪ್ ಮಾಡುತ್ತಿದ್ದಾರೆ. 2000 tonnes of food is filled in one place. ಕೋಲಾರದ ಚಿನ್ನದ ಗಣಿಯಲ್ಲಿ ಒಂಭತ್ತು ಸಾವಿರ ಅಡಿಗಳ ಕೆಳಗಡೆ ಇದ್ದ ಸಾವಿರಾರು ಟನ್ ಚಿನ್ನವನ್ನೂ ಬ್ರಿಟಿಷರು ಹೊತ್ತುಕೊಂಡು ಹೋದರು. ನಾವು ಈ 50 ವರ್ಷಗಳಲ್ಲಿ ಕೇವಲ ನೂರು ಟನ್ ಮಾತ್ರ ಚಿನ್ನ ತೆಗೆದುಕೊಂಡಿದ್ದೇವೆ. ಬ್ರಿಟೀಷರು ಲೆಕ್ಕಕ್ಕೆ 700ಟನ್ ಎಂದು ಹೇಳಿದ್ದಾರೆ. ಆದರೆ ಅವರು ಸಾವಿರ ಟನ್ ಚಿನ್ನವನ್ನು ತೆಗೆದುಕೊಂಡು ಹೋಗಿದ್ದಾರೆ. ನಾವು ಈ ನೂರು ಟನ್‌ಗೆ ಸಾವಿರ ಟನ್‌ನಷ್ಟು ದುಡ್ಡು ಮಾಡವಂತಹ ಕೆಪ್ಯಾಸಿಟಿ ಎಲ್ಲಿದೆ ಎಂದರೆ ಈ ಸಿಟಿ ಇವತ್ತು ದೊಡ್ಡದಾಗಿ ಬೆಳೆದು ಪ್ರತಿ ದಿವಸ ಡಂಪ್ ಮಾಡುತ್ತಾರಲ್ಲಾ that you call it as a "Gold Mine" ಇವತ್ತು ಅನುಭವಸ್ಥರು ಒಂದು ಕೆ.ಜಿ. ಡಿಪಿಎಗೆ 7 ರೂಗಳನ್ನು ಕೊಟ್ಟಿದ್ದೀರಿ. ಇನ್ನು ಕೆಲವು ದಿವಸಗಳು ಹೋದರೆ ಅದು 10ರೂ.ಗಳಾಗುತ್ತದೆ. ಇದರ ಬೆಲೆ ಏರುತ್ತಲೇ ಹೋಗುತ್ತದೆ. ಇದನ್ನು ಶಾಲೆಗಳಲ್ಲಿ ಕಾರ್ಯರೂಪಕ್ಕೆ ತರಬೇಕು, ಶಾಲೆಗಳಲ್ಲಿ ಮಕ್ಕಳಿಗೆ ಇದನ್ನು ತಿಳಿಸಬೇಕು. ನಾನು ನನ್ನ ಮೊಮ್ಮಕ್ಕಳನ್ನು ಒಳ್ಳೆಯ ಶಾಲೆಗೆ ಕಳುಹಿಸಬೇಕು, ಡಿಸಿಪ್ಲೀನ್ ಕಲಿಸಬೇಕು, ಜೊತೆಗೆ ಎರಡು ಕೈಯಲ್ಲಿ ಸಗಣಿ ಎತ್ತುವುದನ್ನು ಕಲಿಸಬೇಕು. That means dignity of labour ಇದು ಚಿಕ್ಕವಯಸ್ಸಿನಲ್ಲೇ ಹೋಗುಬೇಕು. ನಾನೂ ಕೂಡ ನಮ್ಮ ತಂದೆಯವರ ಕಾಲದಲ್ಲಿ ಪಾಯಖಾನ ಹೊತ್ತಿದ್ದೇನೆ, ನಾನೂ ಸಹ ರೈತನಾಗಿದ್ದೇನೆ. ಇದು ಬೆಂಗಳೂರಿನಲ್ಲಿ ಬರಬೇಕು. ನಾವು ಬರೀ ಗಾಂಧಿಯನ್ ಎಕಾನಮಿ ಪುಸ್ತಕ ಓದುವುದು ಆಗಬಾರದು ಮತ್ತೆ ಪ್ಲಾನಿಂಗ್ ಚೇರ್ಮನ್ ಹೇಳುವಂತಹ ರೀತಿಯಲ್ಲಿ ನಾವು ಹೋದರೆ ಆಗುವುದಿಲ್ಲ. ಇದರ ಬಗ್ಗೆ ನಾವು ಸ್ವಲ್ಪ ಚಿಂತನೆ ಮಾಡಬೇಕು. ಮಾನ್ಯ ಬೈರೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸಬೇಕೆಂದು ಹೇಳಿದ್ದಾರೆ. ತಾವು ಬಯಾಲಾಜಿಕಲ್ ಗಾರ್ಡನ್ ಮಾಡಬೇಕೆಂದು ಹೇಳಿದ್ದಾರೆ. ನೀವು ಕೊಟ್ಟಿಗೆ ಗೊಬ್ಬರವನ್ನು ಯೂಸ್ ಮಾಡಿ ಆಹಾರವನ್ನು ಬೆಳೆದೆ ನೋಡಿ. ಆದನ್ನು ಮನೆಗಳಲ್ಲಿ ಅಡಿಗೆ ಮಾಡುತ್ತಿದ್ದಾರೆ, ಆ ಆಹಾರದ ವಾಸನೆ

ಗೇಟಿಗೆ ಬರುತ್ತದೆ. ನಾವು ಕೊಟ್ಟಿಗೆ ಗೊಬ್ಬರವನ್ನು ಹಾಕಿ ಬೆಳೆಯನ್ನು ಬೆಳೆದರೆ ಅದು ತಿನ್ನುವ ಆಹಾರದಲ್ಲಿ ರುಚಿ ಇರುತ್ತದೆ. ಲಂಡನ್‌ನಲ್ಲಿ ತಯಾರು ಮಾಡುವಂತಹ ಕುಟಿಕರಾ ಪೌಡರ್ ಆ ಆಹಾರದಲ್ಲಿರುತ್ತದೆ, ಜಪಾನ್ ದೇಶದಲ್ಲಿ ಮಾಡುವಂತಹ ವ್ಯಾನಿಷಿಂಗ್ ಕ್ರೀಮ್ ಈ ಆಹಾರದಲ್ಲಿರುತ್ತದೆ. Do you want to know the cost of 50 ML of perfume there? It is Rs. 5,000/- in Japan. ಜಪಾನ್‌ನಿಂದ ತರುವಂತಹ ಆ ಸೆಂಟ್ ಈ ಆಹಾರದಲ್ಲಿರುತ್ತದೆ. ಪಾರ್ವತಿ-ಪರಮೇಶ್ವರರು ಈ ಆಹಾರವನ್ನು ತಿಂದರೆ ನೆಮ್ಮದಿಯಿಂದ ಇರುತ್ತಾರೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಕಳಿಕಳಿಯಿಂದ ಕೇಳಿಕೊಳ್ಳುವುದೆನೆಂದರೆ ಈ ಕೊಟ್ಟಿಗೆ ಗೊಬ್ಬರದ ಬಗ್ಗೆ ಕ್ರಾಂತಿಯಾಗಬೇಕು. Let our Senior leaders, Mr. J.H. Patel, Mr. Siddaramaiah and Mr. Byregowda, ಇವರ ಕಾಲದಲ್ಲಿ ಇದು ಶುರುವಾಯಿತು ಎಂದು ಆಗಬೇಕು. ಇವತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಬರುತ್ತಿಲ್ಲ. ಇದು ವ್ಯತ್ಯಾಸವಾಗಿದೆ, ಇದಕ್ಕೆ ಕಾರಣಗಳು ಇದೆ. ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರು ಹೇಳಿದ ಹಾಗೆ ಗಾಯಕ್ಕೆ ಮುಲಾಮು ಹಾಕುವುದು ಬೇಡ, ಇಲ್ಲಿ ರಕ್ತವೇ ಬದಲಾವಣೆಯಾಗಬೇಕು. ನಾವು ಫರ್ಟಿಲೈಜರ್ಸ್ ಹಾಕಿ ಹಾಕಿ ಭೂಮಿ ರೋಸ್ಟ್ ಆಗಿದೆ, ಇನ್ನೊಂದು ಕಡೆ ಜನಸಂಖ್ಯೆ ಹೆಚ್ಚಾಗುತ್ತಿದೆ. ಹೀಗಾಗಿ ಹುಟ್ಟುವ ಮಕ್ಕಳಿಗೆಲ್ಲಾ ವಾಕ್ಸಿನ್ನೇ.....

ಅಧ್ಯಕ್ಷರು : ಈಗ ನಾವು ಸ್ವಲ್ಪ ಹೆಚ್ಚು ಕಡಿಮೆ ಹಾಗೆಯೇ ಆಗಿದ್ದೇವೆ.

ಶ್ರೀ ಎನ್. ರಾಜಣ್ಣ : ಭೂಮಿಗೆ ವಿಶ್ರಾಂತಿಯೇ ಇಲ್ಲ. There is no holiday for soil. ನಾನು ಮಾನ್ಯ ಪುಟ್ಟಣ್ಣಯನವರನ್ನು ಕೇಳುವುದೇನೆಂದರೆ ವರ್ಷದಲ್ಲಿ ಭೂಮಿಗೆ ಎಷ್ಟು ತಿಂಗಳ ರೆಸ್ಟ್ ಕೊಡುತ್ತೀರಾ ? 3-4 ತಿಂಗಳುಗಳು ರೆಸ್ಟ್ ಕೊಡುತ್ತೀರಾ ? ಭೂಮಿಯಲ್ಲಿ ಮೂರು ಬೆಳೆಗಳನ್ನು ಬೆಳೆದರೆ ಭೂಮಿಗೆ ಎಲ್ಲಿ ವಿಶ್ರಾಂತಿ ಇದೆ? ಮಿನಿಮಮ್ ಮೂರು ತಿಂಗಳು ಭೂಮಿ ಡ್ರೈ ಆಗಬೇಕು. ಅದಕ್ಕೋಸ್ಕರ ನಾನು ಈ ಹೈನುಗಾರಿಕೆ ತೋಟಗಾರಿಕೆ, ವ್ಯವಸಾಯ, ಮೀನುಗಾರಿಕೆ, ಈ ನಾಲ್ಕು ಸೇರಿದರೆ ಹತ್ತು ಆಗುತ್ತದೆ. ಹತ್ತರಲ್ಲಿ ಒಂದು ಮೈನಸ್ ಆದರೆ ಒಂಭತ್ತು ಇರುತ್ತದೆ. Number nine is very important number in the history. ಒಂಭತ್ತೋದಲ ಒಂಭತ್ತು (9x1=9), ಒಂಭತ್ತು ಎರಡಲ ಹದಿನೆಂಟು (9x2=18), ಒಂದು ಪ್ಲಸ್ ಎಂಟು (8+1=9) ಒಂಭತ್ತು, ಒಂಭತ್ತು ಮೂರುಲ ಇಪ್ಪತ್ತೇಳು (9x3=27) ಎರಡು ಪ್ಲಸ್ ಏಳು ಒಂಭತ್ತು (2+7=9) ಒಂಭತ್ತು ನಾಲ್ಕಲ ಮೂವತ್ತಾರು (9x4=36) ಇದು ಹಿಸ್ಟರಿ.

ಅಧ್ಯಕ್ಷರು : ನಾನು ಮಾನ್ಯ ಬೈರೇಗೌಡರಿಗೆ ಸಹಾಯವಾಗಲಿ ಎಂದು ಹೇಳಿದರೆ ನೀವು ಹರಿಕಥೆಯನ್ನು ಹೇಳುತ್ತಾ ಇದ್ದೀರಲ್ಲಾ.....

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, 9ನೇ ಸಂಖ್ಯೆ ಬಹಳ ಮುಖ್ಯವಾದದ್ದು. 9 ಪ್ಲಾನೆಟ್‌ಗಳು, 9 ನವಗ್ರಹಗಳು, 9 ನವಧಾನ್ಯಗಳು, 9 ಅನ್ನಾಂಗಗಳು, a man can live with nine vitamins contained in milk for 300 years. I request our Hon'ble Minister to see that this "Green Revolution" must be changed to "Kottige Gobbara Revolution"

ಅಧ್ಯಕ್ಷರು : ಕೊಟ್ಟಿಗೆ ಗೊಬ್ಬರದಲ್ಲಿ ಇದ್ದರೆ ಹೇಗೆ ಬೇರೆ ಐಟಂಗೆ ಹೋಗಬೇಕಲ್ಲವೇ?

ಶ್ರೀ ಎನ್. ರಾಜಣ್ಣ : ಇದು ಎಲ್ಲಿಗೆ ಮುಟ್ಟಿದೆ ಎಂದರೆ, ಇವತ್ತಿನ ಆರೋಗ್ಯಕ್ಕೆ ಅಫೆಕ್ಟ್ ಆಗಿದೆ : ಈ ಆಹಾರ ಆರೋಗ್ಯಕ್ಕೆ ಬಹಳ ಡಿಫೆಕ್ಟೀವ್ ಆಗಿದೆ. ಅದರ ಜೊತೆಗೆ ಇವತ್ತು ನಿನ್ನೆ ಧರಣಿ ನೋಡಿದಿರಿ, it is nothing but creating and extracting....

1955ರ ಹಿಂದೆ ಪೆಸ್ಟಿಸೈಡ್ಸ್ ಎಲ್ಲಾದರೂ ಉಪಯೋಗ ಮಾಡಿದ್ದನ್ನೂ ತಾವು ನೋಡಿದ್ದೀರಾ? Your consumption of pesticides may be about 200 metric tonnes throughout the State in 1955. What is the total quantity of pesticides that you are using today? Your fertiliser consumption in 1955 was only 4,000 M.Tonnes. Today it is 11 lakhs M.Tonnes. 11 ಲಕ್ಷ ಟನ್‌ಗಳ ಫರ್ಟಿಲೈಸರ್ ಅನ್ನು ನೀವು ಉಪಯೋಗ ಮಾಡಿ 93 ಲಕ್ಷ ಟನ್‌ಗಳಷ್ಟು ಆಹಾರಧಾನ್ಯಗಳನ್ನು ಉತ್ಪಾದನೆ ಮಾಡಿದ್ದೀರಿ ಆದರೆ ಅದರಲ್ಲಿ ಸ್ಪೆಬಿಲಿಟಿ ಇಲ್ಲ, ಸ್ಟ್ರೆಂಗ್ತ್ ಇಲ್ಲ, ಆರೋಗ್ಯವಿಲ್ಲ, ಅದಕ್ಕಾಗಿ ನಾವು ಕೊಟ್ಟಿಗೆ ಗೊಬ್ಬರದ ಬಳಕೆಗೆ ಹೆಚ್ಚಿನ ಒತ್ತು ಕೊಡಬೇಕೆಂದು ನಾನು ತಮ್ಮಲ್ಲಿ ಕಳುಕಳಿಯಿಂದ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪೆಸ್ಟಿಸೈಡ್ಸ್ ಕೊಟ್ಟಿಗೆ ಗೊಬ್ಬರವೆಲ್ಲಾ ಮುಗಿಯಿತು. ಈಗ ಹೈನುಗಾರಿಕೆ, ಕುರಿ, ಮೇಕೆ, ದನ, ಹಂದಿ ಇತ್ಯಾದಿಗಳನ್ನು ಹೇಗೆ ಸಾಕುವುದು, ಯಾವ್ಯಾವುದರಲ್ಲಿ ನಷ್ಟ ಎಷ್ಟಿದೆ, ಲಾಭ ಎಷ್ಟಿದೆ ಎನ್ನುವುದರ ಬಗ್ಗೆ ಹೇಳಿ.

ಶ್ರೀ ಎನ್. ರಾಜಣ್ಣ : ಸರ್, ನಾನು ನನ್ನ ತೋಟದಲ್ಲಿ ಒಂದು ಪದ್ಯವನ್ನು ಬರೆದಿದ್ದೇನೆ, ಬಸವಣ್ಣನವರಿಂದ ಒಂದೆರಡು ಅಂಶಗಳನ್ನು ತೆಗೆದುಕೊಂಡು ಮಿಕ್ಕಿದ್ದು ನಾನು ಬರೆದಿದ್ದೇನೆ. "ಕಸದಿಂದ ರಸ, ರಸದಿಂದ ನಮ್ಮ ಆರೋಗ್ಯ, ಕಸದಿಂದ ಭೂಮಿಯ ಆರೋಗ್ಯ, ಭೂಮಿಯ ಆರೋಗ್ಯದಿಂದ ನಮ್ಮ ಆರೋಗ್ಯ ಇದನ್ನು ಪಾಲಿಸುವವರಿಗೆ ರೋಗವೇ ಇಲ್ಲ. ನಾಟಿ ಜೋಳದ ಕಡ್ಡಿ, ಕುದುರೆ ಹುರುಳಿ, ಅಳಸಂದಿ ಗರಿಕೆ ಹುಲ್ಲು ದನಗಳ ಮೇವು. ಕಸದಿಂದ ರಸ, ರಸದಿಂದ ಅಮೃತ, ಅಮೃತದಿಂದ ಆರೋಗ್ಯ, ಆರೋಗ್ಯದಿಂದ ನೂರು ವರ್ಷ ಬಾಳು." ಸರ್, ಹಸು ಕಾಡಿನಲ್ಲಿ ಮೇಯ್ದಿಕೊಂಡು ಬಂದರೆ ಅದರ ಹಾಲನ್ನು ಕುಡಿದು ಋಷಿಗಳು ನೂರು, ಮೂನ್ನೂರು ವರ್ಷಗಳ ಕಾಲ ಬದುಕಿದ್ದರು.

ಶ್ರೀ ವಾಟಾಳ್ ನಾಗರಾಜ್ : ಅದು ನನಗೆ ಗದ್ಯರೂಪದಲ್ಲಿದೆಯೋ, ಪದ್ಯರೂಪದಲ್ಲಿದೆಯೋ ಇನ್ನು ಅರ್ಥವಾಗುತ್ತಿಲ್ಲ, ಆದರೂ ಅವರು ಏನೋ ಹೇಳಿದ ಮೇಲೆ ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಅದು ಅವರು ಸ್ವಂತ ರಚನೆ ಮಾಡಿರುವುದು.

ಶ್ರೀ ಎಸ್. ಸುರೇಶ್ ಕುಮಾರ್ : ಅನೇಕ ಕಥೆಯಲ್ಲಿ, ಕವಿತೆಯಲ್ಲಿ ಸೊಗಡಿರುತ್ತದೆ, ಇದರಲ್ಲಿ ಸಗಣಿಯ ವಾಸನೆಯಂತೂ ಇದೆ .

ಶ್ರೀ ಎನ್. ರಾಜಣ್ಣ : ಶ್ರೀ ವಾಟಾಳ್ ನಾಗರಾಜ್‌ರವರೇ ತಾವು ಹಿರಿಯ ಸದಸ್ಯರು, ನಿಜವಾಗಿ ಡಾ : ಕುಮಾರಪ್ಪ, ಗಾಂಧೀಜಿ ಆ ಕ್ಷೇತ್ರದಲ್ಲಿದ್ದವರು ಬಸವಣ್ಣನವರು ಹನ್ನೆರಡನೆ

ಶತಮಾನದಲ್ಲಿ ಕಸದಿಂದ ರಸಮಾಡಿ ಎಂದು ಹೇಳಿಬಿಟ್ಟರು, ನಾನು ಆ ಕಸದಿಂದ ರಸವನ್ನೇ ಮಾಡಿ ಆ ಪದ್ಯವನ್ನು ಬರೆದಿರುವುದು. ಬಸವಣ್ಣನವರು ತಮ್ಮ ಪದ್ಯದಲ್ಲಿ ಹೇಳಿರುವುದು, ಕಸದಿಂದ ರಸ, ರಸದಿಂದ ಅಮೃತ, ಅಮೃತದಿಂದ ನೂರು ವರ್ಷಗಳ ಬಾಳು. ಶ್ರೀ ಭಟ್‌ರವರ ತಂದೆತಾಯಿಗಳೆಲ್ಲಾ ಬರಿ ಹಾಲನ್ನೇ ಕುಡಿದು ನೂರು ವರ್ಷ ಬದುಕಿರುತ್ತಾರೆ, ಆದರಲ್ಲೂ ಬ್ರಾಹ್ಮಣರು ಜಾಸ್ತಿ ಹಾಲನ್ನು ಕುಡಿದು ನೂರು ವರ್ಷ ಬದುಕಿರುತ್ತಾರೆ; ನಾವು ಇಪ್ಪತ್ತೆಂಟು ತಿಂದು ಬೇಗ ಹೋಗುತ್ತೇವೆ.

ಅಧ್ಯಕ್ಷರು : ನಾನು ಏನೋ ಓದುತ್ತಿದೆ, ಕೇಳಿಸಿಕೊಳ್ಳಲಿಲ್ಲ, ತಾವು ಏನು ಹೇಳಿದ್ದುದು ರಾಜಣ್ಣನವರೇ? ದಯಮಾಡಿ ಮತ್ತೊಮ್ಮೆ ಹೇಳಿ.

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಹಿರಿಯರಾದ ವಾಟಾಳ್ ನಾಗರಾಜ್‌ರವರು ಏನೋ ಸಗಣಿ ವಾಸನೆ ಬರುತ್ತದೆ ಎಂದು ಹೇಳಿದರು.

ಅಧ್ಯಕ್ಷರು : ಇಲ್ಲ, ಅವರೇ ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಲಿಲ್ಲ, ಸ್ವಲ್ಪ ಹಾಸ್ಯವಿರಬಹುದು, ನಾನು ರಾಜಣ್ಣನವರ ಭಾಷಣವನ್ನು ಪ್ರಾಮಾಣಿಕವಾಗಿ ಮೆಚ್ಚುತ್ತಿದ್ದೇನೆ. ಆದರೆ ಸಗಣಿ ಎಂದು ಹೇಳಿದವರು, ನಿಮ್ಮ ಜೊತೆ ನಗರಸಭಾ ಸದಸ್ಯರಾಗಿದ್ದಂಥ ಸುರೇಶ್‌ಕುಮಾರ್‌ರವರು ಹೇಳಿದ್ದು. ನಾನು ಹೇಳುವುದು ಇಷ್ಟೆ, ಇದು ಗದ್ಯವೊ, ಪದ್ಯವೊ ಗೊತ್ತಿಲ್ಲವೆಂದು ಹೇಳಿದೆ ಅಷ್ಟೇ ಹೊರತು, ಅದರ ವಾಸನೆಯ ಬಗ್ಗೆ ಹೇಳಲಿಲ್ಲ, ವಾಸನೆ ಬಗ್ಗೆ ಹೇಳಿದವರು ಇವರು. ತಾವು, ಹಾಲು ಕುಡಿದರೆ ನೂರು ವರ್ಷಗಳ ಕಾಲ ಬದುಕುತ್ತಾರೆಂದೇನೋ ಹೇಳಿದರಲ್ಲಾ ಅದನ್ನು ಮತ್ತೊಮ್ಮೆ ಹೇಳಿ ಅಧ್ಯಕ್ಷರು ಕೇಳಿಸಿಕೊಳ್ಳುತ್ತಾರೆ.

ಶ್ರೀ ಎನ್. ರಾಜಣ್ಣ : ಹಸು ಮೇಯ್ದು ಹಾಲು ಕೊಟ್ಟರೆ, ಬ್ರಾಹ್ಮಣರು ಆ ಹಾಲನ್ನು ಕುಡಿದು ನೂರು ವರ್ಷಗಳಿಗಿಂತ ಹೆಚ್ಚು ಕಾಲ ಬದುಕುತ್ತಿದ್ದರು ಎಂದು ಹೇಳಿದೆ. ಆದರೆ ನಾವು ಚಿಕನ್ ಕಬಾಬ್ ಎಲ್ಲಾ ತಿಂದು ಐವತ್ತು ವರ್ಷಕ್ಕೆ ಇಲ್ಲದ ಕಾಯಿಲೆಯನ್ನು ತಂದುಕೊಳ್ಳುತ್ತಿದ್ದೇವೆ. ಅಷ್ಟೇ ವ್ಯತ್ಯಾಸ. ವಾಟಾಳ್ ನಾಗರಾಜ್‌ರವರು ಕೇಳಿದ್ದಕ್ಕೆ ನಾನು ಒಂದು ಸ್ಪಷ್ಟನೆಯನ್ನು ಕೊಟ್ಟುಬಿಡುತ್ತೇನೆ. ಕೂಡಲ ಮಠದ ಸ್ವಾಮಿಜಿಯವರು ಸಿಡ್ಲಿ ಗ್ರಾಮದಲ್ಲಿ, ಗದಗ್ ಜಿಲ್ಲೆ, ಇಲ್ಲಿ ಅವರು ಕಸ ತೆಗೆದು ಯಾವ ರೀತಿ ಗೋಬರ್ ಗ್ಯಾಸ್ ಮಾಡಿ ಉಪಯೋಗಿಸುತ್ತಿದ್ದಾರೆನ್ನುವುದನ್ನು ತಾವು ನೋಡಬೇಕು. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಮೊನ್ನೆ ಮಾತನಾಡುವಾಗ ಒಂದು ಮಾತನ್ನು ಹೇಳಿದರು. ದಿನಾಂಕ 21.4.98ರ ಸಂಜೆ ನಾಲ್ಕು ಗಂಟೆ ನಲವತ್ತು ನಿಮಿಷಕ್ಕೆ ಇವತ್ತು ಆರೋಗ್ಯ ಕೆಟ್ಟಿರುವುದು ಈ ಕಲಬೆರೆಕೆ ಆಹಾರದಿಂದ ಎಂದು ಹೇಳಿದರು. ಕಲಬೆರೆಕೆ ಆಹಾರ ಮೊದಲನೆಯದು, ಎರಡನೆಯದು ಕೀಟನಾಶಕಗಳ ಬಳಕೆ, ಮೂರನೆಯದು ಫರ್ಟಿಲೈಸರ್ಸ್ ತಾಯಿ ಗರ್ಭದಿಂದ ಬಂದಂಥ ಮಗುವಿಗೆ 48 ಗಂಟೆಗಳ ಕಾಲದಲ್ಲಿ ಮಗು ಬಾಯಿ ತೆಗೆದರೆ ತಾಯಿ ಎದೆ ಹಾಲನ್ನು ಕುಡಿಸುತ್ತಾಳೆ. ಆ ಹಾಲು ನೂರಾರು ಫಿಲ್ಟರ್‌ನಿಂದ ಬರುತ್ತವೆ, ಅಂಥ ಶುದ್ಧ ಹಾಲಿನಲ್ಲೂ ಕೂಡ ಪಾಯಿಂಟ್ ಜಿರೊ ಜಿರೊ ಫೈವ್ ಫರ್ಸೆಂಟ್ ಡಿಡಿಟಿ ಇದೆ ಎಂದರೆ ಈ ದೇಶ ಯಾವ ಮಟ್ಟಕ್ಕೆ ಬಂದಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ನಿಮ್ಮಂಥ (ಸಿ. ಬೈರೇಗೌಡ) ಅನುಭವಸ್ಥರು ಬಂದು ರದ್ದುಪಡಿಸಿದಿರಿ. ಅದೇ ರೀತಿ

ಬಯಲಿನಲ್ಲೆಲ್ಲಾ ಹಸು ಮೇಯಿದು ಬಂದು ಹಾಲು ನೂರಾರು ಫಿಲ್ಟರ್ ಆಗಿ ಬರುತ್ತದೆ, ಆ ಹಾಲನ್ನು ಮಗುವಿಗೆ ಕೊಡುತ್ತಾರೆ. In this whole world, there is only one father, but there are two mothers. The mother who gives birth to a baby is first mother, the mother who feeds the children is the second mother. I am looking after the second mother for the last fifty years. ಮಾತನಾಡುವಾಗ ಕೆಲವು ಸಾರಿ ಸ್ಲಿಪ್ ಆಗುತ್ತದೆ. ಸರ್ದಾರ್ ವಲ್ಲಬಾಯಿ ಪಟೇಲ್‌ರವರು ಹಾಗೂ ಮುರಾರ್ಜಿ ದೇಸಯಿಯವರು, 1940ರಲ್ಲಿ ಗುಜರಾತ್‌ನಲ್ಲಿ ಮೊದಲು ಡೇರಿ ಪ್ರಾರಂಭಿಸಿದ್ದು. ನಂತರ ಬ್ರಿಟೀಷ್‌ನವರು ಗುಜರಾತ್‌ನಲ್ಲಿ ಬಾಲಸನ್ ಎನ್ನುವ ಕಂಪನಿಯವರು ಹಾಲನ್ನು ತಯಾರು ಮಾಡುತ್ತಿದ್ದರು. ಬಾಲ್‌ಸನ್ ಬಟರ್, ಬಾಲಸನ್ ಕ್ರೀಂ, ಬಾಲಸನ್ ಮಿಲ್ಕ್ ಮೇಡ್ ಎಲ್ಲವನ್ನೂ ತಯಾರು ಮಾಡಲಾಗುತ್ತಿತ್ತು. ಆದರೆ ಆ ರೈತರಿಗೆ ಸರಿಯಾಗಿ ಹಣವನ್ನು ಕೊಡುತ್ತಿರಲಿಲ್ಲ ಆಮೇಲೆ ಒಂದು ಕ್ರಾಂತಿಯೇ ಆದ ಮೇಲೆ ಭಾರತದಲ್ಲಿ ಮೊದಲು ಡೇರಿಯನ್ನು ಪ್ರಾರಂಭ ಮಾಡಿದವರು ಧೀಮಂತ ನಾಯಕ ಸರ್ದಾರ್ ವಲ್ಲಬಾಯಿ ಪಟೇಲ್ ಹಾಗೂ ಶ್ರೀ ಮುರಾರ್ಜಿ ದೇಸಾಯಿಯವರು, ಕರ್ನಾಟಕದಲ್ಲಿ 1960ರಲ್ಲಿ ಶ್ರೀ ಎಂ. ಕೃಷ್ಣಪ್ಪನವರು ಇದನ್ನು ಪ್ರಾರಂಭ ಮಾಡಿದರು. We used to call this as white revolution. ಬಿಳಿಯ ಕ್ರಾಂತಿ ಎಂದು ಕರೆಯುತ್ತಾರೆ. ಇವತ್ತು ಕರ್ನಾಟಕದಲ್ಲಿ ದಿನಕ್ಕೆ 20 ಲಕ್ಷ ಲೀಟರ್ ಹಾಲನ್ನು ಪ್ರೊಡ್ಯೂಸ್ ಮಾಡುವಂಥ ಸ್ಥಿತಿಗೆ ಬಂದಿದೆ. I must be grateful to the Government.

ಅಧ್ಯಕ್ಷರು : ಹಾಲು ಉತ್ಪಾದಕರಿಗೆ ಧನ್ಯವಾದಗಳನ್ನು ಅರ್ಪಿಸಿ. ಹಾಲು ಉತ್ಪಾದಕರು ಹಾಲು ಉತ್ಪಾದನೆ ಮಾಡಿದರೆ ನೀವು ಸರ್ಕಾರಕ್ಕೆ ಏಕೆ ಧನ್ಯವಾದಗಳನ್ನು ಸಲ್ಲಿಸುತ್ತೀರಿ ?

ಬಿ.ಬಿ. ನಿಂಗಯ್ಯ : ಕರ್ನಾಟಕದಲ್ಲಿ 20 ಲಕ್ಷ ಹಾಲು ಉತ್ಪಾದನೆ ಆಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅದು 20 ಲಕ್ಷ ಲೀಟರ್ ಹಾಲಿನ ಉತ್ಪಾದನೆ ಅಲ್ಲ. ದಿನಕ್ಕೆ ಸುಮಾರು 85 ಲಕ್ಷ ಲೀಟರ್‌ನಷ್ಟು ಹಾಲು ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ.

ಶ್ರೀ ಎನ್. ರಾಜಣ್ಣ : ಕೆ.ಎಂ.ಎಫ್. ಒಂದೇ 20 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆ ಮಾಡುತ್ತಿದೆ ಎಂದು ಹೇಳಿದ್ದು. In Gujarat, Mr. Kurian, first man from Britain ಬಂದು ಸೇರಿಕೊಂಡರು. That is called National Dairy Development Board. Today their wealth is Rs. 3,000 crores. I want to ask out Hon'ble Minister for small Scale Industries, Mr. Mohideen, ಇವತ್ತು ಲಾಸ್‌ನಲ್ಲಿ ನಡೆಯುತ್ತಿರುವಂಥ ಇಂಡಸ್ಟ್ರೀಗಳಿಗೆ ಸುಮಾರು 900 ಕೋಟಿ ರೂಪಾಯಿಗಳಷ್ಟು ಮನ್ನಾ ಮಾಡುತ್ತಿದ್ದಾರೆ. 147 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವ ಪರಿಸ್ಥಿತಿ ಬಂದಿದೆಯೆಂದು ಕಳೆದ ಸಲ ಸರ್ಕಾರ ಉತ್ತರ ಕೊಡುವಾಗ ಹೇಳಿದೆ. ಆದರೆ ಹಸಿರು ಕ್ರಾಂತಿಯಲ್ಲಿ ಮತ್ತು ಬಿಳಿಯ ಕ್ರಾಂತಿಯಲ್ಲಿ ಲಾಸ್ ಆಗಿಲ್ಲ. ಒಂದು ವೇಳೆ ಲಾಸ್ ಆದರೆ ಆ ರೈತರಿಗೆ ಸಾಲ ಅಥವಾ ಬಡ್ಡಿ ಮನ್ನಾ ಮಾಡುವ ಪ್ರಶ್ನೆಯೇ ಸರ್ಕಾರದಲ್ಲಿ ಇಲ್ಲ. ಮೊದಲು ಕೈಗಾರಿಕಾ ಕ್ರಾಂತಿ ಆಯಿತು, ಅನಂತರ ಹಸಿರುಕ್ರಾಂತಿ ಆಯಿತು, ಆ ಮೇಲೆ ವೈಟ್ ರೆವಲ್ಯೂಷನ್ ಆಯಿತು. ಈ 'ವೈಟ್

ರೆವಲ್ಯೂಷನ್‌ನಲ್ಲಿ' ಇವತ್ತು 'ಅಮುಲ್' ಕಂಪನಿಯವರು 3 ಸಾವಿರ ಕೋಟಿ ರೂಪಾಯಿಗಳಷ್ಟು ಸಂಪತ್ತು ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ಶ್ರೀ ರಾಜಣ್ಣರವರೇ, ನೀವು ಎಲ್ಲಾ ಇಲಾಖೆಗಳ ವಿಚಾರವಾಗಿ ಮಾತನಾಡಬೇಕಲ್ಲವೇ? ಇನ್ನು ರೇಷ್ಮೆ ಇಲಾಖೆ, ತೋಟಗಾರಿಕೆ ಇಲಾಖೆ, ಮೀನುಗಾರಿಕೆ ಇಲಾಖೆ ಹೀಗೆ ಇನ್ನೂ ಹಲವು ವಿಚಾರಗಳ ಬಗ್ಗೆ ನೀವು ಮಾತನಾಡಬೇಕಲ್ಲವೇ? ಪೂರ್ತಿ ರೆವಲ್ಯೂಷನ್ಸ್ ಬಗ್ಗೆ ಮಾತನಾಡಿ ಮುಗಿಸುವುದಕ್ಕೆ ಇನ್ನು ಎಷ್ಟು ಹೊತ್ತು ತಮಗೆ ಬೇಕಾಗಬಹುದು?

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ವೈಟ್ ರೆವಲ್ಯೂಷನ್ ಬಗ್ಗೆ ಇನ್ನು ಅರ್ಧ ಗಂಟೆಯೊಳಗೆ ಮಾತನಾಡಿ ಮುಗಿಸುತ್ತೇನೆ. ತಾವು ನನಗೆ ಎಷ್ಟು ಹೊತ್ತು ಮಾತನಾಡಲು ಸಮಯ ಕೊಡುತ್ತೀರೋ ಅಷ್ಟು ಹೊತ್ತು ನಾನು ಮಾತನಾಡುತ್ತೇನೆ. Because I must honour and obey the Chair.

ಅಧ್ಯಕ್ಷರು : ಹಾಗಲ್ಲ, ನನಗೆ ಗೊತ್ತಿದೆ, ಅದಕ್ಕೆ ನಾನು ನಿಮ್ಮನ್ನು ಕೆಲವು ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಪ್ರೀತಿಯಿಂದ ಕರೆಯುತ್ತಿರುವುದು. ಪಶುವೈದ್ಯ ಮತ್ತು ಮೀನುಗಾರಿಕೆ ಇಲಾಖೆ ಬಗ್ಗೆ ತಮಗೆಲಾ ಗೊತ್ತಿರುವುದರಿಂದ ಎಷ್ಟು ಸಮಯ ಬೇಕಾಗಬಹುದು ಎಂದು ಕೇಳುತ್ತಿದ್ದೇನೆ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಮೀನುಗಾರಿಕೆ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಬಗ್ಗೆ ಮಾತನಾಡಲು 5 ನಿಮಿಷ ಸಾಕು. ಆದರೆ ಬಿಳಿಯ ಕ್ರಾಂತಿ ಬಗ್ಗೆ ಮಾತನಾಡಲು ಮಾತ್ರ ಸಮಯವನ್ನು ಸ್ವಲ್ಪ ಹೆಚ್ಚು ಕೊಡಬೇಕು?

ಅಧ್ಯಕ್ಷರು : ಮೀನುಗಾರಿಕೆಯಲ್ಲಿ ನೀವು ಇನ್‌ಲ್ಯಾಂಡ್ ಫಿಷರೀಸ್ ಮತ್ತು ಡೀಪ್ ಫಿಷಿಂಗ್ ಬಗ್ಗೆಯೂ ಮಾತನಾಡಬೇಕಲ್ಲವೇ?

ಶ್ರೀ ಎನ್. ರಾಜಣ್ಣ : ಈ ವಿಷಯಕ್ಕೆ ಹೆಚ್ಚು ಎಂದರೆ 5 ನಿಮಿಷ ಸಾಕು.

ಅಧ್ಯಕ್ಷರು : ರಾಜಣ್ಣರವರೆ, ತಾವು ಇವತ್ತೇ ಮಾತನಾಡಿ ಮುಗಿಸುತ್ತೀರಾ ಅಥವಾ ಮುಂದಿನ ಸದನದಲ್ಲಿ ಇನ್ನೂ ಮಾತನಾಡುತ್ತೀರಾ? ಏಕೆಂದರೆ ಈ ಸದನದಲ್ಲಿ ಎಲ್ಲಾ ಸದಸ್ಯರು ಮುಂದಿನ ಸದನ ನಡೆಯುವ ದಿವಸ ಇರುತ್ತಾರೆ. ಹೇಗೆ ಮಾಡೋಣ, ಶ್ರೀ ನಾಣಯ್ಯನವರೇ?

ಶ್ರೀ ಎಂ.ಸಿ. ನಾಣಯ್ಯ : ಬಾಕಿ ಇರತಕ್ಕಂಥದ್ದನ್ನು ಮುಂದೆ ಮಾತನಾಡೋಣ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ರಾಜಣ್ಣನವರ ಸ್ಪೀಚನ್ನು 6ನೇ ತಾರೀಖಿಗೆ ಮುಂದುವರೆಸಿದ್ದೇವೆ.

ಶ್ರೀ ಎನ್. ರಾಜಣ್ಣ : ವಂದನೆಗಳು ಸರ್.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, 7 ಗಂಟೆಯವರೆಗೆ ಮಾನ್ಯ ರಾಜಣ್ಣನವರು ಅವರ ಭಾಷಣವನ್ನು ಮುಂದುವರೆಸಲಿ.

ಅಧ್ಯಕ್ಷರು : ಆಗಲಿ, ಶ್ರೀ ರಾಜಣ್ಣನವರೇ, ತಾವು ಈಗ ಸ್ವಲ್ಪ ಹೊತ್ತು ಮಾತನಾಡಿ. ಈಗ ವೈಟ್ ರೆವಲ್ಯೂಷನನ್ನು ಕಂಪ್ಲೀಟ್ ಮಾಡಿಬಿಡಿ.

ಶ್ರೀ ಎನ್. ರಾಜಣ್ಣ : ಆಯಿತು. ನಿಯರ್ಲಿ 6 ಲಕ್ಷ ಸದಸ್ಯರು ಇರತಕ್ಕಂಥ ಸೊಸೈಟಿಗಳು ನಮ್ಮ ಕೆ.ಎಂ.ಎಫ್.ನಲ್ಲಿ ಇವೆ. ಈ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡತಕ್ಕಂಥವರನ್ನು ಬೆಳಿಗ್ಗೆ 8 ಗಂಟೆಗೆ ಬಸ್ಸು ಬಂದು ಅವರನ್ನು ಕರೆದುಕೊಂಡು ಹೋಗುತ್ತದೆ. ಅವರು ಚೆನ್ನಾಗಿ ಇರಲಿ. ಆದರೆ ಹೈನುಗಾರಿಕೆ ಮಾಡತಕ್ಕಂಥ ರೈತರಿಗೆ ಇದು ಬಹಳ ಕಷ್ಟಕರವಾದ ಕೆಲಸವಾಗಿರುತ್ತದೆ. ಒಬ್ಬ ರೈತ ನಾಲ್ಕು ಹಸು ಇಟ್ಟುಕೊಂಡು ಸಾಕುತ್ತಿದ್ದಾನೆಂದರೆ, ಆತನು ಕಾಗೆ ಕೂಗುವುದಕ್ಕೆ ಮುಂಚೆ ಬೆಳಿಗ್ಗೆ 4 ಗಂಟೆಗೆ ಎದ್ದು ಕೆಲಸಮಾಡಬೇಕಾಗುತ್ತದೆ. ಕಾಗೆ ಎದ್ದು ಹೊರಗಡೆ ಹೋಗಿ ಸಂಜೆ ಗೂಡಿಗೆ ಬಂದಾದಮೇಲೂ ಹಸು ಇಟ್ಟುಕೊಂಡಿರುವವನು ಕೆಲಸವನ್ನು ಮಾಡುತ್ತಿರಬೇಕಾಗುತ್ತದೆ. ಅಂದರೆ ಹಸು ಇಟ್ಟುಕೊಂಡಿರುವವನು ದಿನಕ್ಕೆ 18 ಗಂಟೆಗಳ ಕಾಲ ಕೆಲಸ ಮಾಡಲೇ ಬೇಕಾಗುತ್ತದೆ. ರಾತ್ರಿ ಏನಾದರೂ ದನಗಳಿಗೆ ಹೆಚ್ಚುಕಡಿಮೆ ಆದರೆ ಪುನಃ ಅವುಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಹಸುಗಳನ್ನು ಮೆಯಿಂಟೇನ್ ಮಾಡುವವರಿಗೆ ಇಷ್ಟು ಕಷ್ಟವಿರುತ್ತದೆ. ಪೆರಿಶೆಬಲ್ ಐಟಂಗೆ ಬೆಲೆ ಜಾಸ್ತಿ ಆದಾಗ ಬೆಲೆ ಜಾಸ್ತಿ ಆಯಿತೆಂದು ಹೇಳುವುದಕ್ಕೆ ಹೋಗಬೇಡಿ. ಹಾಲು ಉತ್ಪಾದನೆಯವರಿಗೆ ಎಷ್ಟು ಕಷ್ಟವಿದೆಯೆಂದರೆ ಹಾಲು ಉತ್ಪಾದನೆ ಮಾಡುವವರು ಬೆಳಿಗ್ಗೆಯಿಂದ ರಾತ್ರಿವರೆಗೆ ದುಡಿದು ಒಂದು ಲೀಟರ್ ಹಾಲಿಗೆ 50 ಪೈಸೆ ಅಥವಾ ಒಂದು ರೂಪಾಯಿ ಜಾಸ್ತಿ ಆದರೆ ಅದನ್ನು ದೊಡ್ಡದು ಮಾಡುವಂಥ ರಾಜಕೀಯ ಈ ದೇಶದಲ್ಲಿ ಆಗುತ್ತಿದೆ. ಪೆರಿಶೆಬಲ್ ಐಟಂ ಆದ ಟೊಮೆಟೊ 4 ರೂ.ಗಳಿಗೆ ಒಂದು ಕೆ.ಜಿ.ಗೆ ಬರುತ್ತದೆ, ನಂತರ 5 ರೂಪಾಯಿಗಳಿಗೆ ಒಂದು ಕೆಜಿ ಬರುತ್ತದೆ ಆ ನಂತರ ಅದರ ಬೆಲೆ 10 ರೂಪಾಯಿಗಳಿಗೆ ಏರಬಹುದು. ಒಂದು ಕೆ.ಜಿ.ಟೋಮೋಟೋಗೆ 4 ರೂಪಾಯಿಗಳು ಆದಾಗ ಅದನ್ನು ಯಾರೂ ಕೇಳುವುದಿಲ್ಲ. ತರಕಾರಿ ಮತ್ತು ಹಾಲಿನ ಬೆಲೆ ಮಾತ್ರ ಯಾವುದೇ ಕಾಲದಲ್ಲೂ ದಯವಿಟ್ಟು ಬೆಲೆ ಕಡಿಮೆ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಅದರ ಬೆಲೆ ಆಟೋಮೆಟಿಕ್ ಆಗಿ ಮೆಯಿಂಟೇನ್ ಆಗುತ್ತದೆ. ಸಪೋಸ್ ನೀವು ಹಾಲಿನ ಬೆಲೆ ಕಡಿಮೆ ಮಾಡಿ ಎಂದು ಹೇಳಿದರೆ, ಉದಾಹರಣೆಗೆ ಕೆ.ಎಂ.ಎಫ್.ನಲ್ಲಿ ಜನವರಿಯಲ್ಲಿ 18 ಲಕ್ಷ ಲೀಟರ್‌ಗಳಷ್ಟು ಹಾಲು ಒಂದು ದಿನಕ್ಕೆ ಉತ್ಪಾದನೆ ಆಗುವಂಥದ್ದು ಇವತ್ತು 13 ಲಕ್ಷ ಲೀಟರುಗಳಿಗೆ ಇಳಿದಿದೆ. ಅಂದರೆ 5 ಲಕ್ಷ ಲೀಟರ್‌ಗಳಷ್ಟು ಹಾಲು ಕಳೆದ 4 ತಿಂಗಳುಗಳಲ್ಲಿ ಉತ್ಪಾದನೆ ಕಡಿಮೆಯಾಗಿದೆ. ಇದಕ್ಕೆ ಕಾರಣವೇನೆಂದರೆ ಫೀಡ್ಸ್ ಬೆಲೆ ಜಾಸ್ತಿಯಾಗಿದೆ. ಜನ ತಿನ್ನುವ ಒಂದು ಕೆ.ಜಿ. ಗೋಧಿ ಬೆಲೆ 5 ರೂಪಾಯಿಗಳಾದರೆ ಒಂದು ಕೆ.ಜಿ ದನ ತಿನ್ನುವ 'ಬೂಸಾ'ಕ್ಕೆ 7 ರೂಪಾಯಿಗಳಾಗಿವೆ. ಒಬ್ಬ ಮನುಷ್ಯನ ಆರೋಗ್ಯ ಕಾಪಾಡುವಂಥ ಹಾಲಿನ ಬೆಲೆಯನ್ನು ಒಂದು ಲೀಟರ್‌ಗೆ 50 ಪೈಸೆಯಷ್ಟು ಜಾಸ್ತಿ ಮಾಡಿದರೆ ಅದಕ್ಕೆ ವಿರೋಧ ಮಾಡುವುದು ಸರಿಯಲ್ಲ. ಬೆಂಗಳೂರಿನ ಸುತ್ತ ಮುತ್ತಲೂ 50 ರೂಪಾಯಿಗಳಿಂದ ಕಡಿಮೆ ಕೂಲಿಗೆ ಯಾರೂ ಸಿಗುವುದಿಲ್ಲ. ಆದರೆ ಒಂದು ಲೀಟರ್ ಹಾಲನ್ನು ತೆಗೆದುಕೊಂಡು ಹೋದರೆ ಅದನ್ನು ಕುಡಿದು ಒಂದು ಕುಟುಂಬದ ಸದಸ್ಯರೆಲ್ಲಾ ಆರೋಗ್ಯವಾಗಿರುತ್ತಾರೆ. ಆದರೆ ಆ ರೀತಿ ಚಿಂತನೆ ಮಾಡುವವರು ನಮ್ಮಲ್ಲಿ ಬಹಳ ಕಡಿಮೆ ಜನ ಇದ್ದಾರೆ. ಒಂದು ಲೀಟರ್ 'ಫಾಂಟಾ' ಪಾನೀಯಕ್ಕೆ 50 ರೂಪಾಯಿಗಳನ್ನು ಕೊಡುತ್ತೇವೆ, ಒಂದು ಬಾಟ್ಲು ನೀರಿಗೆ 15 ರೂಪಾಯಿ ಕೊಡುತ್ತೇವೆ, ಆದರೆ ಈ ಹಾಲಿಗೆ ಕೇವಲ 50

ಪೈಸೆ ಜಾಸ್ತಿ ಆದರೆ ಏಕೆ ಕೊಡುವುದಕ್ಕೆ ಹಿಂದೇಟು ಹಾಕಬೇಕು? ಆದ್ದರಿಂದ ನಾನು ಎಲ್ಲರಲ್ಲೂ ಮನವಿ ಮಾಡಿಕೊಳ್ಳುವುದೇನೆಂದರೆ, there are two seasons. One is flush season and another is lean season. ಸಾಮಾನ್ಯವಾಗಿ ಲೀನ್ ಸೀಸನ್ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಆಗಿರುವುದರಿಂದ ಆ ಸಮಯದಲ್ಲಿ ಮೇವು ರೇಟ್ ಕಡಿಮೆಯಾಗಬೇಕು.ಆದರೆ ಮೇವು ಬೆಲೆ ಜಾಸ್ತಿಯಾಗಿದೆ. ಮಳೆ ಇಲ್ಲದೆ ಮೇವು ಇಲ್ಲ. ಮೇವು ಇಲ್ಲದೆ ರಾಜ್ಯದಲ್ಲಿ ಸುಮಾರು 5 ಲಕ್ಷದಷ್ಟು ಹಾಲಿನ ಉತ್ಪಾದನೆ ಕಡಿಮೆಯಾಗಿದೆ. ಇದರ ಬಗ್ಗೆ ಚಿಂತನೆ ಮಾಡಬೇಕು. ಮುಂದೆಯೂ ಸಹ ಹಾಲಿನ ಉತ್ಪಾದನೆ ಇನ್ನೂ ಕಡಿಮೆ ಆದರೆ ರಾಜಕಾರಣಿಗಳಾದ ನಾವು ಹಾಲು ಉತ್ಪಾದನೆ ಕಡಿಮೆಯಾಯಿತು ಎಂದು ಅರಚಾಡುತ್ತೇವೆ, ಈ ಅಧಿಕಾರಿಗಳು ಏನು ಮಾಡುತ್ತಾರೆಂದರೆ- ಹೊರಗಡೆಯಿಂದ ಹಾಲಿನ ಪೌಡರನ್ನು ಆಮದು ಮಾಡಿಕೊಂಡು ಅದಕ್ಕೆ ನೀರು ಸೇರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾರೆ. ಅದಕ್ಕೋಸ್ಕರ ಇನ್ನು ಮುಂದೆ ಪೆರಿಶೆಬಲ್ ಐಟಂ ಆದ ಹಾಲಿಗೆ ಲೀಟರ್ ಒಂದಕ್ಕೆ 50 ಪೈಸೆ ಅಥವಾ ಒಂದು ರೂಪಾಯಿ ಹೆಚ್ಚಿಗೆ ಆದಾಗ ಅದಕ್ಕೆ ಯಾರೂ ಸಹ ದಯಮಾಡಿ ಅಬ್ಜೆಕ್ಷನ್ ಮಾಡಬಾರದು. In 1980 what was the payment to the employees in the state? What was the payment in 1991? What is the payment in 1998?

6.40 ಪಿ.ಎಂ.

ಇತ್ತೀಚೆಗೆ ಸರ್ಕಾರಿ ನೌಕರರಿಗೆ ಶೇಕಡ 20ರಷ್ಟು ಸಂಬಳವನ್ನು ಜಾಸ್ತಿ ಮಾಡಿದರು. ಆದರೆ ಇದನ್ನು ಯಾರೂ ಕೇಳುವುದಿಲ್ಲ. ಆ ಬಡವ ಒಂದು ಲೀಟರ್ ಹಾಲಿಗೆ 50 ಪೈಸೆ ಜಾಸ್ತಿ ಮಾಡಿ ಎಂದು ಕೇಳಿದರೆ ಅದನ್ನು ನಾವು ರಾಜಕೀಯವಾಗಿ ನೋಡುತ್ತೇವೆ. ಈ ಹಾಲು ಆರೋಗ್ಯವನ್ನು ಕಾಪಾಡಕತಕ್ಕಂಥ ಆಹಾರವಾಗಿದೆ. 'ಹನಿಯಿಂದ ಹಸಿರು; ಹಸಿರುನಿಂದ ಹಸು; ಹಸು ನಿಂದ ಹಾಲು; ಹಾಲಿನಿಂದ ಆರೋಗ್ಯ. ಅದಕ್ಕೋಸ್ಕರ ದಯಮಾಡಿ ಹಾಲಿನ ಬೆಲೆ ಇನ್ನು ಮುಂದೆ 50 ಪೈಸೆ ಹೆಚ್ಚಿಗೆ ಮಾಡಿದರೆ ಯಾರೂ ಸಹ ಅಬ್ಜೆಕ್ಷನ್ ಮಾಡಬೇಡಿ. ನಾನು ಇದೇ ಕಸುಬಿನಲ್ಲಿ ಇದ್ದೇನೆಂದು ಹೇಳುತ್ತಿಲ್ಲ. ರೈತ ಬಹಳ ಸಫರ್ ಆಗುತ್ತಿದ್ದಾನೆ. ಇನ್ನು 1955ರಲ್ಲಿ ಮೊದಲು 'ಅಮುಲ್' ಕಂಪನಿಯವರು ಅಮುಲ್ ಬೇಬಿ ಫುಡ್ ಎಂದು ಹಾಲಿನ ಪುಡಿಯನ್ನು ಉತ್ಪಾದನೆ ಮಾಡಿದರು. ನಂತರ 'ಗ್ಲಾಕ್ಸೋ' ಕಂಪನಿಯವರು 'ಗ್ಲಾಕ್ಸೋ ಬೇಬಿ ಫುಡ್' ಎಂದು ಉತ್ಪಾದನೆ ಮಾಡಿದರು, 3ನೆಯದಾಗಿ 'ಹಿಂದೂಸ್ಥಾನ್ ಲಿವರ್' ಕಂಪನಿಯವರು ಹಿಂದೂಸ್ಥಾನ್ ಲಿವರ್ ಬೇಬಿ ಫುಡ್ ಎಂದು ಹಾಲಿನ ಪೌಡರನ್ನು ತಯಾರು ಮಾಡಿ ಮಾರ್ಕೆಟ್ಟಿಗೆ ಬಿಡುಗಡೆ ಮಾಡಿದರು. ಇವತ್ತು ಅಧಿಕಾರಿಗಳು, ಕ್ಲರ್ಕ್‌ಗಳು, ರಾಜಕಾರಣಿಗಳು ಹೀಗೆ ಯಾರಾರು ಈ 3 ಬೇಬಿ ಫುಡ್‌ಗಳನ್ನು ಕುಡಿದಿದ್ದಾರೆ, ಅವರ ಮೆಂಟಲ್ ಡಿಸ್‌ಆರ್ಡರ್ ಆಗಿರುತ್ತದೆ, ಅವರ ಬಾಡಿ ಹೆಲ್ತ್ ಡಿಸ್‌ಆರ್ಡರ್ ಆಗಿರುತ್ತದೆ, ಇಂಥ ಬೇಬಿ ಫುಡ್‌ಗಳನ್ನು ಕುಡಿದಂಥವರ ಮನಸ್ಸು ಯಾವ ರೀತಿ ಇರುತ್ತದೆ ಎಂದರೆ 'ಡಬ್ಬ ಹಾಲು ಕುಡಿದಿದ್ದರೆ ಅವರ ಬುದ್ಧಿ ಡಬ್ಬ ಬುದ್ಧಿ ಆಗಿರುತ್ತದೆ ಹಾಗೆಯೇ ಬಾಟ್ಲ್ ಹಾಲು ಕುಡಿದಿದ್ದರೆ ಅವರ ಬುದ್ಧಿ ಬಾಟ್ಲ್ ಬುದ್ಧಿಯಾಗಿರುತ್ತದೆ'.

LA-8370-26

MR. SPEAKER : Well said, well said, ಹೇಗೆ ರಾಜಣ್ಣನವರೇ, ಇನ್ನೊಂದಗು ಸಲ ಹೇಳಿ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, 1955ರಲ್ಲಿ ಕಮರ್ಷಿಯಲ್ ಮೈಂಡ್ ಇರುವ ಹೊರಗಡೆ ದೇಶದವರು ಹಣ ಮಾಡುವುದಕ್ಕೋಸ್ಕರ ನಮ್ಮ ದೇಶಕ್ಕೆ ಬಂದು ಅಮುಲ್ ಬೇಬಿ ಫುಡ್, ಗ್ಲಾಕ್ಸೋ ಬೇಬಿ ಫುಡ್, ಹಿಂದೂಸ್ಥಾನ್ ಲಿವರ್ ಬೇಬಿ ಫುಡ್ ಹೀಗೆ ಇನ್ನೊ ಕೆಲವರು ಬೇಬಿ ಫುಡ್‌ಗಳನ್ನು ಪ್ರೊಡ್ಯೂಸ್ ಮಾಡಿ ಮಾರುಕಟ್ಟೆಗೆ ಡಬ್ಬ ಮತ್ತು ಬಾಟ್ಲಗಳಲ್ಲಿ ಪ್ಯಾಕ್ ಮಾಡಿ ಬಿಡುಗಡೆ ಮಾಡಿದರು. ಯಾರ್ಯಾರ ಮಕ್ಕಳು ಡಬ್ಬ ಹಾಲು ಕುಡಿದಿದ್ದಾರೋ ಅವರಿಗೆ ಡಬ್ಬ ಬುದ್ಧಿ ಮತ್ತು ಯಾರು ಬಾಟ್ಲ್ ಹಾಲು ಕುಡಿದಿದ್ದಾರೋ ಅವರಿಗೆ ಬಾಟ್ಲ್ ಬುದ್ಧಿ ಬಂದಿರುವುದಾಗಿದೆ. ಅಂಥವರಿಗೆ ಇವತ್ತಿನವರೆಗೆ ತಂದೆ ಅಥವಾ ತಾಯಿ ಬುದ್ಧಿ ಬಂದಿಲ್ಲ.

ಅಧ್ಯಕ್ಷರು : ಅಂದರೆ ತಾಯಿ ಹಾಲು ಕುಡಿದವರು ಮಾತ್ರ ಮರ್ಯಾದೆಯಾಗಿ ಇದ್ದಾರೆ.

ಶ್ರೀ ಎನ್. ರಾಜಣ್ಣ : ಮೇಯೋಹಾಲ್ ಇದು ಬ್ರಿಟೀಷರು ಕಟ್ಟಿದ ಕಟ್ಟಡವಾಗಿದೆ. ಆ ಹಾಲ್‌ಗೆ ಮಟ್ಟಿಲು ಹತ್ತಿಕೊಂಡು ಹೋಗುವಾಗ ತಾಯಿ ತನ್ನ ಮಗುವಿಗೆ ಹಾಲು ಕುಡಿಸುವಂಥ ಒಂದು ದೊಡ್ಡದಾದ ಫೋಟೋವನ್ನು ತೂಗುಹಾಕಿದ್ದಾರೆ. ಆ ತಾಯಿ ಮಗುವನ್ನೆತ್ತಿಕೊಂಡು ಹಾಲು ಕುಡಿಸುತ್ತಿದ್ದರೆ ಆ ಮಗುವಿಗೆ ಎಷ್ಟು ಸಂತೋಷವಾಗುತ್ತಿದೆ ಎಂದು ಅದನ್ನು ನೋಡಿದರೆ ಗೊತ್ತಾಗುತ್ತದೆ. ಆ ಮಗುವಿಗೆ ಹಾಲು ಉಣಿಸಬೇಕಾದರೆ ತಾಯಿಯಾದವಳು ಸಂತೋಷ, ಪ್ರೀತಿ ಮಮತೆ ಎಲ್ಲವನ್ನೂ ಮಗುವಿಗೆ ತುಂಬುತ್ತಾಳೆ. I request Hon'ble speaker to see that in every officeಆ ಫೋಟೋವನ್ನು ತಂದು ಎಲ್ಲಾ ಕಛೇರಿಗಳಲ್ಲಿ ಇಡುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಶ್ರೀ ರಾಜಣ್ಣನವರೇ, ಈ ಬೇಬಿ ಫುಡ್‌ಗಳನ್ನೆಲ್ಲಾ ಬ್ಯಾನ್ ಮಾಡಬೇಕಲ್ಲವೇ? ಅಂದರೆ ಈ ಬಾಟಲ್, ಡಬ್ಬ ಬೇಬಿ ಫುಡ್‌ಗಳನ್ನು ಬ್ಯಾನ್ ಮಾಡುವುದಕ್ಕೆ ಸರ್ಕಾರಕ್ಕೆ ಹೇಳಿ,.

ಶ್ರೀ ಎನ್. ರಾಜಣ್ಣ : ಈಗಾಗಲೇ ಆ ಬೇಬಿ ಫುಡ್‌ಗಳ ಡಬ್ಬದ ಮೇಲೆ ಎಚ್ಚರಿಕೆ ಹಾಕಿದ್ದಾರೆ. Taking baby food is injurious to the children. It has already been announced about 10 years back. ಜನ್ಮ ಕೊಡುವುದಕ್ಕೆ ಮುಂಚೆ ತಾಯಿಯಾದವರ ಮನಸ್ಸು ಹೇಗೆ ಇರುತ್ತದೋ ಅದೇ ಮನಸ್ಸು ಮಗುವಿಗೆ ಇರುತ್ತದೆ. ಮಗುವಿಗೆ ಜನ್ಮ ನೀಡಿದ ಮೇಲೆ ತಾಯಿಯಾದವಳು ಸಂತೋಷವಾಗಿ ಮಗುವಿಗೆ ಆಟ ಆಡಿಸಿಕೊಂಡು, ಪ್ರೀತಿ ವಿಶ್ವಾಸ ಮಮತೆಯನ್ನು ತುಂಬಬೇಕಾಗುತ್ತದೆ. ಆದರೆ ಡಬ್ಬ ಹಾಲಿನಲ್ಲಿ ಮಗುವಿಗೆ ಏನು ತುಂಬುವುದಕ್ಕಾಗುತ್ತದೆ. ಡಬ್ಬದ ಹಾಲಿನಿಂದ ಮಗುವಿಗೆ ಏನೂ ತುಂಬುವುದಕ್ಕಾಗುವುದಿಲ್ಲ. ಮನೆಯಲ್ಲಿ ಸಣ್ಣ ಮಗುವಿಗೆ ಬಾಟಲ್‌ನಲ್ಲಿ ಹಾಲು ತುಂಬಿಸಿ ಬಾಯಿಗೆ ಇಡುತ್ತಾರೆ. ಆ ಬಾಟಲ್ ಹಿಡಿದು ಮುಂದೆ ದೊಡ್ಡವನಾಗುತ್ತಾನೆ. 18 ವರ್ಷದ ಮೇಲೆ ಅವನ ಕೈಗೆ ಬಾಟಲ್ ಬಂದು ಬಿಡುತ್ತದೆ.

ಶ್ರೀ ವಾಟಳ್ ನಾಗರಾಜ್ : ಬಾಟಲ್ ಹಿಡಿದವರೆಲ್ಲಾ ಅದೇ ಹಾಲು ಕುಡಿದವರೆಂದು ತೋರುತ್ತದೆ. ಮಂತ್ರಿಗಳು, ರಾಜಕಾರಣಿಗಳು, ಅಧಿಕಾರಿಗಳು, ಪತ್ರಕರ್ತರು ಹೀಗೆ ಯಾರೇ ಇರಬಹುದು, ಬಹಳ ಚೆನ್ನಾಗಿ ಬಾಟಲ್ ಹಿಡಿಯತಕ್ಕಂಥವರೆಲ್ಲಾ ಇಂಥ ಬಾಟಲ್ ಹಾಲು ಕುಡಿದವರೆಂದು ತಿಳಿದುಕೊಳ್ಳಬಹುದಲ್ಲವೇ?

ಅಧ್ಯಕ್ಷರು : ಅದೂ ಕೂಡ ಒಂದು ಪ್ರಬಲವಾದ ಕಾರಣ ಇರಬಹುದು.

ಶ್ರೀ ಎನ್. ರಾಜಣ್ಣ : ಇವತ್ತು ಕಾಲೇಜಿನಲ್ಲಿ ಯಾರು ರ್‍ಯಾಗಿಂಗ್ ಮಾಡುತ್ತಾರೆ, ಅವರೆಲ್ಲಾ ಇದೇ ರೀತಿಯಿಂದ ಬೆಳೆದಿದ್ದಾರೆ. ನನಗೆ ನೂರಾರು ದೂರುಗಳು ಬಂದಿವೆ. ತಾಯಿ ವಿದ್ಯಾವಂತೆ, ತಂದೆ ವಿದ್ಯಾವಂತ ಆದರೆ ಮಗ ಡ್ರಗ್ಸ್ ಅಡಿಕ್ಟ್ ಆಗಿ ಮಾಡಬಾರದ ಕೆಲಸವನ್ನೆಲ್ಲಾ ಮಾಡುತ್ತಾನೆ. ಏಕೆಂದರೆ ತಾಯಿ ತಂದೆ ಕೆಲಸಕ್ಕೆ ಹೋಗಿಬಿಡುತ್ತಾರೆ. ಆ ಮನೆಯಲ್ಲಿರುವ ದಾದಿ ಬಾಟಲ್‌ನಲ್ಲಿ ಹಾಲು ಹಾಕಿ ಮಗುವಿಗೆ ಕುಡಿಸುತ್ತಾಳೆ. ಆದ್ದರಿಂದ ಮೊದಲನೆಯ ಸ್ಥಾನ ತಾಯಿಗೆ ಎರಡನೆಯದು ಹಸುವಿಗೆ. ಈ ಇಲಾಖೆಯನ್ನು ನಾವು ಕಾಪಾಡಬೇಕಾಗಿರುವುದು ಬಹಳ ಮುಖ್ಯವಾಗಿರುತ್ತದೆ. ಮುಂದಿನ 6ನೇ ತಾರೀಖಿನಂದು ಮಾತನಾಡಲು ನನಗೆ ಅವಕಾಶ ಕೊಟ್ಟರೆ ನಾನು ಕೆ.ಎಂ.ಎಫ್. ಮತ್ತು ಅನಿಮಲ್ ಹಸ್ಬೆಂಡರಿ ಬಗ್ಗೆ ವಿವರವಾಗಿ ಅರ್ಧ ಗಂಟೆ ಮಾತನಾಡುತ್ತೇನೆ. ಇವತ್ತು ಇಷ್ಟಕ್ಕೆ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ.

ಅಧ್ಯಕ್ಷರು : ರಾಜಣ್ಣನವರೇ ಅನಿಮಲ್ ಹಸ್ಬಂಡರಿ, ಫೌಲ್ಟರಿ, ಪಿಗರಿ ಬಗ್ಗೆ ಇನ್ನೂ ಏನೂ ನೀವು ಮಾತನಾಡಲಿಲ್ಲ?

SRI N. RAJANNA : I am coming to the poultry also. At least I must be grateful to you. ಕರು ಎಂದರೆ ಏನು? ಪಡ್ಡೆ ಎಂದರೆ ಏನು? ಹೋರಿ ಎಂದರೆ ಏನು? ಗೂಳಿ ಎಂದರೆ ಏನು? ಎತ್ತು ಅಂಗದರೆ ಏನು? ಬಸವ ಎಂದರೆ ಏನು ಎನ್ನುವುದನ್ನು ಹೇಳುತ್ತೇನೆ. ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಎಷ್ಟೋ ರಾಜಕಾರಣಿಗಳಿಗೆ ಇವುಗಳ ವ್ಯತ್ಯಾಸವೇ ಗೊತ್ತಿಲ್ಲ.

ಅಧ್ಯಕ್ಷರು : ಅದಕ್ಕಲ್ಲವೇ ನಾನು ನಿಮ್ಮನ್ನೇ ಮಾತನಾಡಿ ಎಂದು ಹೇಳಿದ್ದುದು. ಈಗ ಉಪಮುಖ್ಯಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಸ್ವಲ್ಪ ಆಯಾಸಗೊಂಡಿದ್ದಾರೆ. ಸರ್ಕಾರದ ಹಿತದೃಷ್ಟಿಯಿಂದ ಮತ್ತು ಅವರ ಆರೋಗ್ಯದ ಹಿತದೃಷ್ಟಿಯಿಂದ ಇವತ್ತು ಚರ್ಚೆಯನ್ನು ಮುಗಿಸೋಣ.

SRI N. RAJANNA : I will keep the Hon'ble Ministers humorous. Thank you Sir, I will continue on 6th. I am grateful to the Hon'ble speaker Sir and all the Members,. Thank you.

ಅಧ್ಯಕ್ಷರು : ಈಗ ಮಾನ್ಯ ಸದಸ್ಯರಾದ ರಾಜಣ್ಣನವರ ಭಾಷಣ ಅಪೂರ್ಣವಾಗಿದೆ. ಪುನಃ ಅವರು 6.5.1998ರಂದು ಮಾತನಾಡಲಿದ್ದಾರೆ. ಅವರು ಇದುವರೆಗೆ ಭಾಷಣ ಮಾಡಿದ್ದಕ್ಕೆ ಅವರಿಗೆ

ನಮ್ಮ ಅಭಿನಂದನೆಗಳನ್ನು ಸಲ್ಲಿಸಿ, ಈಗ ಈ ಸಭೆಯನ್ನು ಮುಂದೂಡಲಾಗಿದೆ. ಪುನಃ 6.5.1998ರ ಬುಧವಾರದಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮತ್ತೆ ಸಂಜೆ 6.50 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 6.5.1998ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).